## 2019 ಕ.ತೀ.ವ 39

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

# ಟಿ. ನಾಗರಾಜ್ ಮತ್ತು ಇತರರು –ವಿರುದ್ಧ– ಚಾಮರಾಜನಗರ ಲೋಕಾಯುಕ್ತ ಪೊಲೀಸ್ ಮತ್ತು ಮತ್ತೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ (ಸಂಕ್ಷಿಪ್ತವಾಗಿ ಇನ್ನುಮುಂದೆ 'ಪಿಸಿ ಅಧಿನಿಯಮ'ವೆಂದು ಉಲ್ಲೇಖಿಸಲಾಗಿದೆ) 13(1)(ಡಿ), (i)(ii)(iii) ಮತ್ತು 13(1)(ಇ) ಪ್ರಕರಣದೊಂದಿಗೆ 13(2)ನೇ ಪ್ರಕರಣವನ್ನು ಓದಿಕೊಂಡು, ಎರಡನೇ ಪ್ರತ್ಯರ್ಜಿದಾರರಾದ ಭ್ರಷ್ಟಾಚಾರ ನಿರೋಧ ಸಂಸ್ಥೆ, ಬಳ್ಳಾರಿ ಇವರು (ಇಲ್ಲಿ ಇನ್ನುಮುಂದೆ ಸಂಕ್ಷಿಪ್ತವಾಗಿ 'ಎಸಿಬಿ' ಎಂದು ಉಲ್ಲೇಖಿಸಲಾಗಿದೆ) ಅರ್ಜಿದಾರರ ವಿರುದ್ಧ ದಿನಾಂಕ: 19.09.2016 ರಂದು ದಾಖಲಿಸಿಕೊಂಡ ಕ್ರಿಮಿನಲ್ ಸಂ. 2/2016ರಲ್ಲಿ ದಾಖಲುಗೊಂಡ ಪ್ರಥಮ ಮಾಹಿತಿ ವರದಿಯನ್ನು ವಜಾಗೊಳಿಸುವಂತೆ ಕೋರಿ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ದಾಖಲಿಸಿದ್ದಾರೆ.

ನಾನು ಈ ಮೊಕದ್ದಮೆಯ ವಾಸ್ತವಿಕ ಅಂಶಗಳನ್ನು ಸಂಬಂಧಪಟ್ಟ ನ್ಯಾಯವಾದಿಗಳು ಮಂಡಿಸಿದ ವಾದಗಳ ಆಧಾರದ ಮೇಲೆ ಸಂಕ್ಷಿಪ್ತವಾಗಿ ನನ್ನ ಗ್ರಹಿಕೆಯನ್ನು ತಿಳಸಲು ಇಚ್ಛಿಸುತ್ತಿದ್ದೇನೆ:

ಸನ್ಮಾನ್ಯ ಉಪ–ಲೋಕಾಯುಕ್ತರು ವಿಶ್ವಾಸನೀಯ ಮೂಲಗಳಿಂದ ಬಳ್ಳಾರಿ ಜಿಲ್ಲೆಯ ಹಗರಿ ತಾಲ್ಲೂಕಿನ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ನ ಕಚೇರಿಯಲ್ಲಿ ನಡೆಯುತ್ತಿರುವ

*ಕ್ರಿಮಿನಲ್ ಅರ್ಜಿ ಸಂಖ್ಯೆ: 101438/2016, ದಿನಾಂಕ 23ನೇ ಮಾರ್ಚ್, 2017.

ದುರಾಡಳಿತ ಮತ್ತು ಅಕ್ರಮಗಳ ಬಗೆಗೆ ಖಚಿತ ಮಾಹಿತಿಯನ್ನು ಸ್ವೀಕರಿಸಿರುತ್ತಾರೆ. ಆ ಮಾಹಿತಿಯ ಆಧಾರದ ಮೇಲೆ ಉಪಲೋಕಾಯುಕ್ತರು ಅಂಥ ದುರಾಡಳಿತ ಖಚಿತಪಡಿಸಿಕೊಳ್ಳುವುದಕ್ಕೋಸ್ಕರ ಕೆಲವು ತನಿಖೆಯನ್ನು ನಡೆಸಿರುತ್ತಾರೆ. ತನಿಖೆಗಳಿಂದ ಅಂಥ ವಿಶ್ವಾಸನೀಯ ಮಾಹಿತಿಯು ಅವರಿಗೆ ತೃಪ್ತಿಕರವಾಗಿರುವುದು ಕಂಡುಬಂದ ಪರಿಣಾಮ ದಿನಾಂಕ 27.08.2016 ರಂದು ಸಂ. ದೂರು/ಉ.ಲೋ/ಬಿಡಿ/1430/2016 ರಲ್ಲಿ ಮೊಕದ್ದಮೆಯನ್ನು ದಾಖಲಿಸಿಕೊಂಡಿರುತ್ತಾರೆ ಮತ್ತು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ 7(2)ನೇ ಮತ್ತು 9ನೇ ಪ್ರಕರಣವನ್ನು ಸಂಜ್ಞಾನಕ್ಕೆ ತಂದುಕೊಂಡು ಸ್ವಯಂಪ್ರೇರಿತವಾಗಿ ಶೋಧನಾ ವಾರೆಂಟನ್ನು ಜಾರಿಮಾಡಿರುತ್ತಾರೆ. ಸದರಿ ಶೋಧನಾ ವಾರಂಟನ್ನು ಮೇಲಿನ ಸದರಿ ಕಚೇರಿಗೆ ಅಗತ್ಯಪಡಿಸಿದಂತಹ ನೆರವಿನೊಂದಿಗೆ, ವಾರಂಟನ್ನು ಜಾರಿಮಾಡುವುದು ಅವಶ್ಯವೆನಿಸಿ ಯುಕ್ತಪಡೆಯೊಂದಿಗೆ ಶ್ರೀ ರವಿ ಕುಮಾರ್, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ಇವರು ಮೇಲಿನ ಸದರಿ ಕಚೇರಿಯನ್ನು ಜಪ್ತಿಮಾಡಿ ಅಧಿಕೃತವಾಗಿ ಸದರಿ ಶೋಧನಾ ವಾರೆಂಟನ್ನು ಹೊರಡಿಸಿರುತ್ತಾರೆ. ಮೇಲೆ ಹೇಳಲಾದ ಸದರಿ ಕಚೇರಿಯನ್ನು ಭಾಗಶಃ ಶೋಧನೆಮಾಡಿ ಜಪ್ತಿಗೊಳಿಸಲು ಮತ್ತು ತನಿಖೆಯ ಉದ್ದೇಶಕ್ಕಾಗಿ ಸಂಬಂಧಪಟ್ಟ ಕಡತಗಳನ್ನು ಮತ್ತು ದಸ್ತಾವೇಜುಗಳನ್ನು ಮತ್ತು ಸುಸಂಗತ ಇತರ ದಾಖಲೆಗಳನ್ನು, ಸ್ವಾಧೀನಪಡಿಸಿಕೊಳ್ಳಲು ಯಾರೇ ಸಿಬ್ಬಂದಿ/ಅಧಿಕಾರಿಯನ್ನು ಅಭಿರಕ್ಷಣೆ ತೆಗೆದುಕೊಳ್ಳಲು ಮತ್ತು ಆ ಕೂಡಲೇ ಅವರನ್ನು ಲೋಕಾಯುಕ್ತರ ಮುಂದೆ ಹಾಜರುಪಡಿಸುವ ಸಂಬಂಧದಲ್ಲಿ ಹಾಗೂ ಮುಂದಿನ ಕ್ರಮಗಳ ಜಾರಿಗಾಗಿ ಅಧಿಕೃತವಾಗಿ ಒಪ್ಪಿಗೆ ರುಜು ಪಡೆದಿರುವುದು ಇಲ್ಲಿ ಕಂಡುಬಂದಿರುತ್ತದೆ. ಮೇಲಿನ ಸದರಿ ಶೋಧನ ವಾರೆಂಟಿನ ಆಧಾರದ ಮೇಲೆ, ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಪೊಲೀಸ್ ಇನ್ಸ್‌ಪೆಕ್ಟರ್‌ರಾದ ಶ್ರೀ ಕೆ.ಆರ್. ಗೋಪಿಕೃಷ್ಣ ಅವರೊಂದಿಗೆ 23.08.2016 ರಂದು ಮುಂಜಾನೆ ಸುಮಾರು 5.00 ಗಂಟೆಯ ಸಮಯದಲ್ಲಿ ಸದರಿ ಕಚೇರಿ ಎಂದರೆ ಬಳ್ಳಾರಿಯ ಹಗರಿಯ ಗುಂತ್ಕಲ್ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ನ ಸದರಿ ಕಚೇರಿಯ ಮೇಲೆ ದಾಳಿ ನಡೆಸಿರುವರು. ದಾಳಿಯ ಸಂದರ್ಭದಲ್ಲಿ ಅರ್ಜಿದಾರರು ಕಚೇರಿಯಲ್ಲಿಯೇ ಇದ್ದರು. ಅವರೆಲ್ಲರಿಗೂ ಉಪಲೋಕಾಯುಕ್ತರು ಶೋಧನೆ ನಡೆಸಲು ಹೊರಡಿಸಿದ ವಾರೆಂಟನ್ನು ತೋರಿಸಿದ ನಂತರ ಕಚೇರಿಯನ್ನು ಭಾಗಶಃ ಶೋಧನೆಮಾಡಲು ಉಪಕ್ರಮಿಸಲಾಗಿರುತ್ತದೆ. ಮೇಲಿನ ಸದರಿ ಶೋಧನಾ

ಕಾರ್ಯಾಚರಣೆ ಮಾಡುತ್ತಿರುವ ಕಾಲಾವಧಿಯಲ್ಲಿ ಲೋಕಾಯುಕ್ತ ಪೋಲೀಸರಿಗೆ ಕಚೇರಿಯ ಗೊದ್ರೆಜ್ ಅಲ್ಮೆರಾದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು 15,300/– ರೂಪಾಯಿಗಳು ಕಂಡುಬಂದಿರುತ್ತದೆ. ಅದನ್ನು ಸಹ ಲೋಕಾಯುಕ್ತ ಪೋಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ವಶಪಡಿಸಿಕೊಂಡ ಸದರಿ ಮೊತ್ತಕ್ಕೆ ಸಂಬಂಧಪಟ್ಟಂತೆ ಅರ್ಜಿದಾರರು, ಸದರಿ ಕಚೇರಿಯ ತಪಾಸಣೆಮಾಡುವ ಮೂಲಕ ದಂಡದ ರೂಪದಲ್ಲಿ ಸಂಗ್ರಹಿಸಿದ ಮೊತ್ತವಾಗಿದೆ ಎಂದು ರಶೀದಿ ಪುಸ್ತಕವನ್ನು ಈ ಸಂಬಂಧದಲ್ಲಿ ಹಾಜರುಪಡಿಸಿರುತ್ತಾರೆ.

ಲೋಕಾಯುಕ್ತ ಪೋಲೀಸರು ಸದರಿ ಕಚೇರಿಯನ್ನು ಶೋಧನೆಮಾಡುವ ಕಾಲಾವಧಿಯಲ್ಲಿ ಕಂಪ್ಯೂಟರ್ ಮೇಜಿನ ಕಪಾಟಿನಲ್ಲಿ 1,450/– ರೂಪಾಯಿಗಳು ಇರುವುದು ಸಹ ಕಂಡುಬಂದಿರುತ್ತದೆ ಹಾಗೂ ಆ ಮೊತ್ತವನ್ನು ಸಹ ವಶಪಡಿಸಿಕೊಳ್ಳಲಾಗಿರುತ್ತದೆ. ಸದರಿ ಹಣದ ಬಗೆಗೆ ಲೋಕಾಯುಕ್ತ ಪೋಲೀಸರು ತನಿಖೆ ನಡೆಸಿದಾಗ ಅಲ್ಲಿಯ ಸಿಬ್ಬಂದಿ ಲೋಕಾಯುಕ್ತ ಪೋಲೀಸರಿಗೆ ಯಾವುದೇ ಯುಕ್ತವಾದ ಉತ್ತರವನ್ನು ನೀಡಿರುವುದಿಲ್ಲ. ಲೋಕಾಯುಕ್ತ ಪೋಲೀಸರು ಸದರಿ ಕಚೇರಿಯಲ್ಲಿ ರಶೀದಿ ಪುಸ್ತಕಗಳು ಮತ್ತು ಲಕೋಟೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಆದರೆ ರಶೀದಿ ಪುಸ್ತಕದಲ್ಲಿ ಏನನ್ನು ಲಿಖಿತದಲ್ಲಿ ನಮೂದಿಸಿರುವುದಿಲ್ಲ. ಹಾಗೂ ವಶಪಡಿಸಿಕೊಂಡ ಸದರಿ ಲಕೋಟೆಯನ್ನು ಪರಿಶೀಲಿಸಿದಾಗ 51 ಸ್ಟಾಂಪ್‌ಗಳು (ಭಾರತ ಧ್ವಜ) ಜೊತೆಯಲ್ಲಿ 140/– ರೂಪಾಯಿ ನಗದು ಇರುವುದು ಕಂಡುಬರುತ್ತದೆ. 1ನೇ ಸಂಖ್ಯೆಯ ಅರ್ಜಿದಾರನು ದಿನಾಂಕ 05.03.2016ರ ಪತ್ರದೊಂದಿಗೆ ಪ್ರತಿಯೊಂದು ಸ್ಟಾಂಪ್ 10 ರೂಪಾಯಿ ಮುಖಬೆಲೆಯ ಸುಮಾರು 400 ಸ್ಟಾಂಪ್‌ಗಳನ್ನು ಸಹ ಹಾಜರುಪಡಿಸಿರುತ್ತಾನೆ ಆದರೆ ಆ ಎಲ್ಲಾ ಸ್ಟಾಂಪ್‌ಗಳು ಸಮಯೋಚಿತವಾಗಿರುತ್ತದೆ ಮತ್ತು ಸ್ಟಾಂಪ್‌ಗಳನ್ನು ಮಾರಾಟ ಮಾಡಿರುವುದಿಲ್ಲ. ಆದುದರಿಂದ ಲೋಕಾಯುಕ್ತ ಪೋಲೀಸರು ಒಟ್ಟು ಮೊತ್ತ 1,590/ – ರೂಪಾಯಿಗಳನ್ನು ಮತ್ತು 51 ಹಳೆಯ ಸ್ಟಾಂಪ್‌ಗಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಕಚೇರಿಯಲ್ಲಿ ವಶಪಡಿಸಿಕೊಂಡ 1,590/– ರೂಪಾಯಿಗಳಿಗೆ ಸಿಬ್ಬಂದಿಯವರು ಯಾವುದೇ ಯುಕ್ತವಾದ ವಿವರಣೆಯನ್ನು ನೀಡಿರುವುದಿಲ್ಲ ಹಾಗೂ ಈ ಸಂಬಂಧದಲ್ಲಿ ಯಾವುದೇ ಯುಕ್ತವಾದ ವಿವರಣೆಯನ್ನು ನೀಡಿರುವುದಿಲ್ಲ ಹಾಗೂ ಈ ಸಂಬಂಧದಲ್ಲಿ ಯಾವುದೇ ರಶೀದಿಯನ್ನು ಹಾಜರುಪಡಿಸಿರದ ಕಾರಣ ಈ ಮೊತ್ತವು ಸಿಬ್ಬಂದಿಯೂ

ಅಕ್ರಮವಾಗಿ ಸಂಗ್ರಹಿಸಿದ ಹಣವೆಂಬ ಸಂಶಯದಿಂದ ಕಚೇರಿಯ ತನಿಖೆಯ ಕಾಲಾವಧಿಯಲ್ಲಿ ಎಲ್ಲಾ ದಸ್ತಾವೇಜುಗಳನ್ನು ಜಪ್ತಿ ಮಾಡಲಾಗಿರುತ್ತದೆ.

ಲೋಕಾಯುಕ್ತ ಪೊಲೀಸರು ಮಾಡಿದ ಮೇಲಿನ ಪ್ರಾಥಮಿಕ ತನಿಖೆಯ ಆಧಾರದ ಮೇಲೆ ಮತ್ತು ಸನ್ಮಾನ್ಯ ಉಪಲೋಕಾಯುಕ್ತರು ಹೊರಡಿಸಿದ ಶೋಧನಾ ವಾರಂಟಿನ ಆಧಾರದ ಮೇಲೆ ಅರ್ಜಿದಾರರು ಸಂಗ್ರಹಿಸಿದ 1,590/– ರೂಪಾಯಿಗಳ ಮೊತ್ತವನ್ನು ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಸಾರ್ವಜನಿಕರಿಂದ ಅಕ್ರಮವಾಗಿ ಸಂಗ್ರಹಿಸಿದ ಮೊತ್ತ ಸಂಬಂಧದಲ್ಲಿ ಕಚೇರಿಯ ಸಿಬ್ಬಂದಿ ಯಾವುದೇ ಯುಕ್ತವಿವರಣೆ ನೀಡದ ಕಾರಣದಿಂದ ಸಂಶಯಕ್ಕೆಡೆ ಮಾಡಿಕೊಟ್ಟಿದೆ. ಆದುದರಿಂದ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)(ಡಿ), (i)(ii)(iii), 13(1)(ಇ) ಪ್ರಕರಣದ ಅಡಿಯಲ್ಲಿ 13(2)ನೇ ಪ್ರಕರಣದ ಉಪಬಂಧಗಳನ್ನು ಓದಿಕೊಳ್ಳುವುದರೊಂದಿಗೆ ಅರ್ಜಿದಾರರು ಅಪರಾಧದಕೃತ್ಯ ಎಸಗಿದ್ದಾರೆಂದು ತಿಳಿದುಬರುತ್ತದೆ.

ಅದರಂತೆ, ಬಳ್ಳಾರಿ ಜಿಲ್ಲೆಯ, ಕರ್ನಾಟಕ ಭ್ರಷ್ಟಾಚಾರ ನಿರೋಧ ಸಂಸ್ಥೆ ಬಳ್ಳಾರಿ ಇವರಿಗೆ ಲಗತ್ತಾಗಿರುವ ಪೊಲೀಸ್ ಇನ್ಸ್‌ಪೆಕ್ಟರ್ ಅವರು ಮೇಲಿನ ಸದರಿ ಅಪರಾಧದ ಸಂಬಂಧದಲ್ಲಿ ಅದರ ಆಧಾರದ ಮೇಲೆ ಕ್ರಿಮಿನಲ್ ಸಂ. 2/2016ರಲ್ಲಿ ಮೊಕದ್ದಮೆಯನ್ನು ನೋಂದಾಯಿಸಿಕೊಂಡಿರುತ್ತಾರೆ. ಹೀಗೆ ನೋಂದಾಯಿತವಾದ ಕ್ರಿಮಿನಲ್ ಅರ್ಜಿಯನ್ನು ವಜಾಮಾಡಬೇಕೆಂದು ಪ್ರಾರ್ಥಿಸಿ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ನ್ಯಾಯಾಲಯದ ಮುಂದೆ ಅರ್ಜಿದಾರರ ಪರವಾದ ಮಾನ್ಯ ನ್ಯಾಯವಾದಿಗಳು, ಸರ್ಕಾರವು ದಿನಾಂಕ 19.03.2016 ರಂದು ಹೊರಡಿಸಿದ ಅಧಿಸೂಚನೆಯಲ್ಲಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದಡಿಯಲ್ಲಿ ಎಸಗಿದ ಅಪರಾಧಗಳನ್ನು ತನಿಖೆ ಮಾಡುವಂಥ ಅಧಿಕಾರವನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆಯೊಳಗೆ ನಿಹಿತಗೊಳಿಸಿರುವುದರಿಂದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಎಸಗಿದ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಉಪಲೋಕಾಯುಕ್ತರು ಹೊರಡಿಸಿದ ಶೋಧನಾ ವಾರೆಂಟಿನ ಆಧಾರದ

ಮೇಲೆ ಲೋಕಾಯುಕ್ತ ಪೋಲೀಸರು ಶೋಧನೆ ನಡೆಸುವ ಅಧಿಕಾರದ ವ್ಯಾಪ್ತಿಯನ್ನು ಹೊಂದಿಲ್ಲವೆಂಬ ಗಂಭೀರವಾದ ವಾದಾಂಶವನ್ನು ಎತ್ತಿಹಿಡಿದಿರುವರು. ಎರಡನೆಯದಾಗಿ, ಅವರು ವಾದವನ್ನು ಮುಂದುವರೆಸುತ್ತಾ ಲೋಕಾಯುಕ್ತ ಪೋಲೀಸರಿಗೆ ಇರುವ ಆ ಯಾವುದೇ ಅಧಿಕಾರವ್ಯಾಪ್ತಿ ಇದ್ದರೆ ಅದನ್ನು ಖಚಿತಪಡಿಸಬೇಕೆಂದು, ಅವರು ತನಿಖೆಮಾಡುವ ಮುಂಚೆಯೇ ಮೊಕದ್ದಮೆಯನ್ನು ನೋಂದಾಯಿಸಲು ಅವರು ಹೊಂದಿರುವ ಅಧಿಕಾರವ್ಯಾಪ್ತಿಯನ್ನು ಸ್ಪಷ್ಟಪಡಿಸಬೇಕೆಂದು ಈ ನ್ಯಾಯಾಲಯ ಮುಂದೆ ನಿವೇದಿಸಿರುತ್ತಾರೆ. ಆದುದರಿಂದ, ಲೋಕಾಯುಕ್ತ ಪೋಲೀಸರು ಯಾವುದೇ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸದ ಹೊರತು, ಅವರು ಅಧಿಕಾರವ್ಯಾಪ್ತಿಯನ್ನು ಮೀರಿ ಶೋಧನೆ, ಜಪ್ತಿ ಮತ್ತು ತನಿಖೆಯನ್ನು ಮಾಡಿರುತ್ತಾರೆ ಎಂಬುದು ನ್ಯಾಯವಾದಿಗಳ ವಾದಾಂಶವಾಗಿರುತ್ತದೆ. ಮೂರನೆಯದಾಗಿ, ಅರ್ಜಿದಾರರ ನ್ಯಾಯವಾದಿಗಳು ಈ ನ್ಯಾಯಾಲಯದ ಮುಂದೆ ಲೋಕಾಯುಕ್ತ ಪೋಲೀಸರು ಅರ್ಜಿದಾರರ ಸದರಿ ಕಚೇರಿಯ ಸ್ಥಳವನ್ನು ವಶಪಡಿಸಿಕೊಂಡು, ಪರಿಶೀಲಿಸುವ ಸಮಯದಲ್ಲಿ ಅರ್ಜಿದಾರರು ಕೆಲವು ಅಪರಾಧ ಎಸಗಿರುವುದು ಆ ಸಮಯದಲ್ಲಿ ಸ್ವತಃ ಕಂಡುಬಂದಾಗಲು, ಅವರು ಭ್ರಷ್ಟಾಚಾರ ನಿರೋಧ ಸಂಸ್ಥೆಗೆ ತನಿಖೆಯನ್ನು ವಹಿಸಿಕೊಡದೇ, ಅವರು ಶೋಧನೆ ಮತ್ತು ಜಪ್ತಿಯನ್ನು ಮುಂದುವರಿಸಿರುತ್ತಾರೆ ಮತ್ತು ತದನಂತರದಲ್ಲಿ ಸಾಕಷ್ಟು ಕಾಲದ ವಿಳಂಬದ ನಂತರದಲ್ಲಿ ದಿನಾಂಕ: 17.09.2016 ರಂದು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿರುತ್ತಾರೆ. ಅಂದರೆ 25 ದಿನಗಳ ವಿಳಂಬವಾಗಿ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೋಲೀಸರಿಗೆ ಸದರಿ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ವಾದಾಂಶದಲ್ಲಿ ನಿವೇದಿಸಿರುವರು. ನ್ಯಾಯವಾದಿಗಳು ತಮ್ಮ ವಾದವನ್ನು ಮುಂದುವರೆಸುತ್ತಾ, ಲೋಕಾಯುಕ್ತ ಪೋಲೀಸರು ಮೇಲಿನ ಸದರಿ ಮಾಹಿತಿಯ ಆಧಾರದ ಮೇಲೆ ಮೊಕದ್ದಮೆಯನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆ ಪೋಲೀಸರು ತಪ್ಪಾಗಿ ನೋಂದಾಯಿಸಿಕೊಂಡಿರುವರು ಮತ್ತು ಲೋಕಾಯುಕ್ತ ಪೋಲೀಸರು ಸ್ವತಃ ಸಂಪೂರ್ಣಗೊಳಿಸಿದ ತನಿಖೆಯನ್ನು ಮತ್ತಷ್ಟು ತನಿಖೆಯನ್ನು ಮುಂದುವರೆಸುವುದಕ್ಕೆ ಭ್ರಷ್ಟಾಚಾರ ನಿರೋಧ ಸಂಸ್ಥೆಗೆ ಯಾವುದೇ ಅಧಿಕಾರವ್ಯಾಪ್ತಿಯಾಗಲೀ, ಅಧಿಕಾರವಾಗಲೀ ಇರುವುದಿಲ್ಲ ಎಂದು ವಾದಾಂಶದಲ್ಲಿ ನಿವೇದಿಸಿರುವರು.

ಈ ಹಿನ್ನೆಲೆಯಲ್ಲಿ, ನಾನು ಈಗಾಗಲೇ ಮಾಡಿದ ಪರಾಮರ್ಶೆಯಂತೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ 10ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಉಪಲೋಕಾಯುಕ್ತರು ಶೋಧನಾ ವಾರೆಂಟನ್ನು ಹೊರಡಿಸಿರುವರು. ಆದುದರಿಂದ, ಯಾವುದೇ ಊಹಾತ್ಮಕ ರೀತಿಯಲ್ಲೂ ಉಪಲೋಕಾಯುಕ್ತರು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ತನಿಖೆ ಮಾಡುವುದಕ್ಕೆ ಲೋಕಾಯುಕ್ತ ಪೋಲೀಸರಿಗೆ ನಿರ್ದೇಶಿಸಿದ್ದಾರೆಂದು ಹೇಳಲು ಬರುವುದಿಲ್ಲ. ಆದರೆ, ಬಳ್ಳಾರಿ ಜಿಲ್ಲೆಯ ಹಗರಿಯ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ನಲ್ಲಿ ಎಸಗಿರುವ ಯಾವುದೇ ದುರಾಡಳಿತ ಅಥವಾ ಅಕ್ರಮಗಳನ್ನು ಖಚಿತಪಡಿಸಿಕೊಳ್ಳುವುದಕ್ಕೆ ಉಪಲೋಕಾಯುಕ್ತರು ತನಿಖೆಗೆ ನಿರ್ದೇಶಿಸಿರುವರು. ಸನ್ಮಾನ್ಯ ಉಪ–ಲೋಕಾಯುಕ್ತರು ಯಾವ ನಿಖರವಾದ ವಿಶ್ವಸನೀಯ ಮಾಹಿತಿಯಿಂದ ಅಂಥ ಶೋಧನಾ ವಾರೆಂಟ್ ಆದೇಶವನ್ನು ಹೊರಡಿಸಿದ್ದಾರೆಂದು ಪ್ರಶ್ನಿಸುವಂತಿಲ್ಲ ಮತ್ತು ಮಾಹಿತಿಯನ್ನು ಗೋಪ್ಯವಾಗಿ ಇಟ್ಟುಕೊಳ್ಳುವುದು ಉಪಲೋಕಾಯುಕ್ತರ ವಿವೇಚನೆಯಾಗಿರುತ್ತದೆ. ಹಾಗೆಯೇ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಅಡಿಯಲ್ಲಿ ಉಪಲೋಕಾಯುಕ್ತರು ಅಂಥ ಮಾಹಿತಿಯು ಪರ್ಯಾಪ್ತವಾದುದೆಂದು ಸ್ವತಃ ಅವರೇ ತೃಪ್ತಿಯನ್ನು ವ್ಯಕ್ತಪಡಿಸಿದಾಗ ಮಾತ್ರವೇ ಆ ಸಂಬಂಧದಲ್ಲಿ ಸಮುಚಿತವಾದ ಆದೇಶವನ್ನು ಅವರು ಹೊರಡಿಸಬಹುದಾಗಿದೆ. ಆದುದರಿಂದ, ಮಾನ್ಯ ನ್ಯಾಯವಾದಿಗಳು, ಮಂಡಿಸಿದ, ಲೋಕಾಯುಕ್ತ ಪೋಲೀಸರು ಅರ್ಜಿದಾರರ ಕಚೇರಿಗೆ ವಿಚಾರಣೆ ಅಥವಾ ತನಿಖೆಯ ಉದ್ದೇಶಕ್ಕಾಗಿ ಹೋಗುವ ಮುಂಚೆಯೇ ಮೊದಲು ಮೊಕದ್ದಮೆಯನ್ನು ನೋಂದಾಯಿಸಬೇಕೆಂಬ ವಾದವು ಅಸಮರ್ಥನೀಯವಾಗಿದೆ.

ಮೇಲಿನ ಸದರಿ ಪ್ರಕರಣವು ಯಾವುದೇ ಸಂಜ್ಞೇಯ ಅಪರಾಧವನ್ನು ತಡೆಯುವುದಕ್ಕಾಗಿ ಅಥವಾ ಪತ್ತೆಹಚ್ಚುವುದಕ್ಕಾಗಿ ಔಪಚಾರಿಕತೆ ಮತ್ತು ವಿಳಂಬತೆಯ ಹೊರತಾಗಿ ತ್ವರಿತವಾಗಿ ಕೆಲಸವನ್ನು ನಿರ್ವಹಿಸಲು ಪೋಲೀಸರಿಗೆ ವ್ಯಾಪಕವಾದ ಅಧಿಕಾರಗಳನ್ನು ಪ್ರದತ್ತಗೊಳಿಸಿದೆ. ಅದರಿಂದ ನ್ಯಾಯಾಲಯವು ಇಂತಹ ಅಧಿಕಾರಗಳು, ದೂರುಗಳನ್ನು ದುರುಪಯೋಗ ಪಡಿಸಿಕೊಂಡಿಲ್ಲದಿರುವ ಅಥವಾ ವೈಯಕ್ತಿಕ ಭಾವನೆಗಳ ಸಮಾಧಾನಕ್ಕಾಗಿ ಬಳಸಿಕೊಂಡಿಲ್ಲದಿರುವ ಅಥವಾ ಅಂತಹ ಯಾವ ಉದ್ದೇಶವನ್ನು ಹೊಂದಿಲ್ಲದಿರುವುದನ್ನು ನಿರ್ದಿಷ್ಟವಾಗಿ ತುಂಬಾ ಜಾಗರೂಕತೆಯಿಂದ ಪದತ್ತ

ಅಧಿಕಾರಗಳನ್ನು ಪರಿಶೀಲಿಸತಕ್ಕದ್ದು. ನಿರ್ದಿಷ್ಟವಾಗಿ ಈ ಮೊಕದ್ದಮೆಯಲ್ಲಿ ತನಿಖೆಯ ಸಂದರ್ಭದಲ್ಲಿ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿರುವುದು ಮತ್ತು ಸ್ವತ್ತುಗಳನ್ನು ಜಪ್ತಿಮಾಡಿರುವುದು ಕಂಡುಬಂದಿದೆ. ನನ್ನ ಅಭಿಪ್ರಾಯದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 41ನೇ ಪ್ರಕರಣದ ಅಡಿಯಲ್ಲಿ ಪೊಲೀಸರಿಗೆ ಪದತ್ತಗೊಳಿಸಿದ ಅಧಿಕಾರವನ್ನು ಅವರು ದುರುಪಯೋಗ ಪಡಿಸಿಕೊಂಡಿರುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಅಲ್ಲದೆ, ಅಧಿಕಾರವ್ಯಾಪ್ತಿಯ ಹೊರತು ವ್ಯಕ್ತಿಯನ್ನು ಬಂಧಿಸುವುದು, ಅಂಥ ಬಂಧನದ ವ್ಯಕ್ತಿಯ ಸ್ವಾತಂತ್ರವನ್ನು ಮಾತ್ರ ಗಂಭೀರವಾಗಿ ಆಕ್ರಮಣ ಮಾಡಿದಂತೆ ಕಂಡುಬರುತ್ತದೆ. ಪೊಲೀಸರು ಕರ್ತವ್ಯವನ್ನು ವಾರೆಂಟಿನ ಹೊರತು ಬಂಧನವನ್ನು ಮಾಡಿರುವಾಗ, ಅವರು ಅಪರಾಧದ ಸಾಧ್ಯತೆಗಳನ್ನು ಪರಿಗಣಿಸಿ ಅವರು ತುಂಬಾ ತ್ವರಿತವಾಗಿ ತೆಗೆದುಕೊಂಡ ತೀರ್ಮಾನ ಸಂದೇಹಕ್ಕೆ ಆಸ್ಪದ ನೀಡಿಲ್ಲ. ಹಾಗೆಯೇ, ಪೊಲೀಸರು ಪ್ರಾಮಾಣಿಕರೂ ಪಾಪಪ್ರಜ್ಞೆಯಿಂದ ಕಳವಳ ಪಟ್ಟಿಕೊಳ್ಳುವಂತಹ ತಪ್ಪನ್ನು ಮಾಡದೆ ತಡೆಯುವುದು ಸಹ ಪೊಲೀಸರ ಕರ್ತವ್ಯಗಳಲ್ಲಿ ಒಂದಾಗಿದೆ. ಪೊಲೀಸರಿಗೆ ವ್ಯಕ್ತಿಯ ಬಂಧನ ಅಥವಾ ಶೋಧನೆ ಮತ್ತು ಸ್ವತ್ತಿನ ಜಪ್ತಿಯೂ ವಿವೇಚನಾಧಿಕಾರವನ್ನು ನೀಡಲಾಗಿದೆ. ಆದಾಗ್ಯೂ, ಪೊಲೀಸರು ಅಂಥ ಅಧಿಕಾರಗಳನ್ನು ತುರ್ತು ಅಗತ್ಯತೆ ಮತ್ತು ಸಂದರ್ಭಗಳಲ್ಲಿ ಮಾತ್ರವೇ ಚಲಾಯಿಸಬೇಕಾಗುತ್ತದೆ. ಈ ಮೊಕದ್ದಮೆಯಲ್ಲಿ ತಪ್ಪು ಕಲ್ಪನೆಯಿಂದಾಗಿ ಪೊಲೀಸ್ ಅಧಿಕಾರಿ ಅರ್ಜಿದಾರರನ್ನು ಬಂಧಿಸಿದ್ದರೆ ಮತ್ತು ಕೆಲವು ವಸ್ತುಗಳನ್ನು ಜಪ್ತಿಮಾಡಿದ್ದರೂ ಅದು ವ್ಯವಹರಣೆಗಳನ್ನು ನಿರರ್ಥಕಗೊಳಿಸಲು ಸಾಧ್ಯವಾಗುವುದಿಲ್ಲ ಈ ಮೊಕದ್ದಮೆಯೂ ಮೇಲಿನ ಸದರಿ ಉಪಬಂಧಗಳ ವ್ಯಾಪ್ತಿಗೆ ಬರುತ್ತದೆ.

ಮೇಲಿನ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳ ಅಡಿಯಲ್ಲಿ, ಲೋಕಾಯುಕ್ತ ಪೊಲೀಸರು ದಾಖಲಿಸಿದ ಪ್ರಥಮ ಮಾಹಿತಿ ವರದಿಯನ್ನು, ವಿಷಯಕ್ಕೊಳಪಟ್ಟು ತನಿಖೆ ಮಾಡುವುದಕ್ಕೆ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರಿಗೆ ಶಾಸನಾತ್ಮಕ ಅಧಿಕಾರವನ್ನು ನಿಹಿತಗೊಳಿಸಿರುವುದರಿಂದ, ಲೋಕಾಯುಕ್ತ ಪೊಲೀಸರು ದಾಖಲಿಸಿದ ಪ್ರಥಮ ಮಾಹಿತಿ ವರದಿಯೂ ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾಗಿದೆ ಎಂದು ಹೇಳಲು ಬರುವುದಿಲ್ಲ. ಆದರೆ, ತನಿಖಾ ಏಜೆನ್ಸಿಯು ನ್ಯಾಯ ಸಮ್ಮತ ವಿವೇಚನೆಯನ್ನು ಬಳಸಿ, ಆಪಾದಿತ ವ್ಯಕ್ತಿಗಳು ವಾಸ್ತವವಾಗಿ ಎಸಗಿದ ಅಪರಾಧಗಳನ್ನು ಎಸಗಿದ್ದಾರೆಯೆ

ಎಂಬುದನ್ನು ಖಚಿತಪಡಿಸಿ ಕೊಂಡು ಅವರ ವಿರುದ್ಧ ಮುಂದಿನ ಕ್ರಮ ತೆಗೆದುಕೊಳ್ಳುವುದು ಮತ್ತು ತದನಂತರದಲ್ಲಿ, ಅವರು ನ್ಯಾಯಾಲಯಕ್ಕೆ ಯುಕ್ತವಾದ ವರದಿಯನ್ನು ಸಲ್ಲಿಸುವುದಕ್ಕೆ ಅವರು ವಿವೇಚನಾಧಿಕಾರವನ್ನು ಹೊಂದಿರುತ್ತಾರೆ.

ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು, ಅರ್ಜಿದಾರರ ವಿರುದ್ಧ ಒಂದೊಮ್ಮೆ ಯುಕ್ತವಾದ ಸಾಕ್ಷ್ಯದ ಅಥವಾ ಆಧಾರದ ಹೊರತು ತನಿಖೆಯನ್ನು ನಡೆಸಿ ಯಾವುದೇ ಆರೋಪ ಪಟ್ಟಿಯನ್ನು ಸಲ್ಲಿಸಿದಲ್ಲಿ, ಆ ತರುವಾಯ, ಅರ್ಜಿದಾರರು ತಮ್ಮ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಅದನ್ನು ಮತ್ತೆ ಪ್ರಶ್ನಿಸುವ ಸ್ವಾತಂತ್ರ್ಯವನ್ನು ಹೊಂದಿರುವರು.

ಈ ಅಭಿಪ್ರಾಯೋಕ್ತಿಗಳೊಂದಿಗೆ, ಕೂಲಂಕಷವಾಗಿ ವಿಚಾರಣೆ ಮಾಡಿದ ಈ ಹಂತದಲ್ಲಿ, ಇಡೀ ವ್ಯವಹರಣೆಗಳನ್ನು ವಜಾಮಾಡುವುದು ಈ ನ್ಯಾಯಾಲಯಕ್ಕೆ ಯುಕ್ತವಾಗಿ ಕಂಡುಬರುವುದಿಲ್ಲ. ಆದುದರಿಂದ, ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ.

ಅದಕ್ಕನುಸಾರವಾಗಿ ಅರ್ಜಿಯನ್ನು ವಜಾಗೊಳಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 2012 (5) ಕೆಎಲ್‌ಜೆ 545<br>ಎಲ್. ಶಂಕರಮೂರ್ತಿ –ವಿರುದ್ಧ–<br>ರಾಜ್ಯ ಲೋಕಾಯುಕ್ತ ಪೊಲೀಸರು* | *(ಉಲ್ಲೇ) 10* |
| *2. 2013 (5) ಕೆಎಲ್‌ಜೆ 470 (ಡಿಬಿ)<br>ಗಿರೀಶ್ ಚಂದ್ರ ಮತ್ತು ಮತ್ತೊಬ್ಬರು –ವಿರುದ್ಧ–<br>ರಾಜ್ಯ ಲೋಕಾಯುಕ್ತ ಪೊಲೀಸರು, ಯಾದಗಿರಿ* | *(ಉಲ್ಲೇ) 10* |
| *3. (2013) 8 ಎಸ್‌ಸಿ 1<br>ಲಲಿತ ಕುಮಾರಿ –ವಿರುದ್ಧ–<br>ಉತ್ತರ ಪ್ರದೇಶ ಸರ್ಕಾರ* | *(ಉಲ್ಲೇ) 11* |

ಅರ್ಜಿದಾರರ ಪರ: ಶ್ರೀಮತಿ ಸುನೀತಾ ಪಿ. ಕಲಸೂರ್, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ಮಲ್ಲಿಕಾರ್ಜುನ್‌ಸ್ವಾಮಿ ಬಿ. ಹಿರೇಮಠ, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಲೋಕಾಯುಕ್ತ).

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:**

ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ (ಸಂಕ್ಷಿಪ್ತವಾಗಿ ಇನ್ನುಮುಂದೆ 'ಪಿಸಿ ಅಧಿನಿಯಮ'ವೆಂದು ಉಲ್ಲೇಖಿಸಲಾಗಿದೆ) 13(1)(ಡಿ), (i)(ii)(iii) ಮತ್ತು 13(1)(ಇ) ಪ್ರಕರಣದೊಂದಿಗೆ 13(2)ನೇ ಪ್ರಕರಣವನ್ನು ಓದಿಕೊಂಡು, ಎರಡನೇ ಪ್ರತ್ಯರ್ಜಿದಾರರಾದ ಭ್ರಷ್ಟಾಚಾರ ನಿರೋಧ ಸಂಸ್ಥೆ, ಬಳ್ಳಾರಿ ಇವರು (ಇಲ್ಲಿ ಇನ್ನುಮುಂದೆ ಸಂಕ್ಷಿಪ್ತವಾಗಿ 'ಎಸಿಬಿ' ಎಂದು ಉಲ್ಲೇಖಿಸಲಾಗಿದೆ) ಅರ್ಜಿದಾರರ ವಿರುದ್ಧ ದಿನಾಂಕ: 19.09.2016 ರಂದು ದಾಖಲಿಸಿಕೊಂಡ ಕ್ರಿಮಿನಲ್ ಸಂ. 2/2016ರಲ್ಲಿ ದಾಖಲುಗೊಂಡ ಪ್ರಥಮ ಮಾಹಿತಿ ವರದಿಯನ್ನು ವಜಾಗೊಳಿಸುವಂತೆ ಕೋರಿ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ದಾಖಲಿಸಿದ್ದಾರೆ.

2. ನಾನು, ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಸುನೀತಾ ಪಿ. ಕಲಸೂರ್ ಅವರ ವಾದವನ್ನು ಮತ್ತು ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ರಾಜ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಲೋಕಾ) ಆಗಿರುವ ಮಾನ್ಯ ನ್ಯಾಯವಾದಿ ಶ್ರೀ ಮಲ್ಲಿಕಾರ್ಜುನ್‌ಸ್ವಾಮಿ ಬಿ. ಹಿರೇಮಠ ಇವರ ವಾದಗಳನ್ನು ಬಹಳ ಜಾಗರೂಕತೆಯಿಂದ ಆಲಿಸಿರುತ್ತೇನೆ ಅದಕ್ಕನುಸಾರವಾಗಿ ದಾಖಲೆಗಳನ್ನು ಪರ್ಯಾಲೋಚಿಸಿರುತ್ತೇನೆ.

3. ನಾನು ಈ ಮೊಕದ್ದಮೆಯ ವಾಸ್ತವಿಕ ಅಂಶಗಳನ್ನು ಸಂಬಂಧಪಟ್ಟ ನ್ಯಾಯವಾದಿಗಳು ಮಂಡಿಸಿದ ವಾದಗಳ ಆಧಾರದ ಮೇಲೆ ಸಂಕ್ಷಿಪ್ತವಾಗಿ ನನ್ನ ಗ್ರಹಿಕೆಯನ್ನು ತಿಳಿಸಲು ಇಚ್ಛಿಸುತ್ತಿದ್ದೇನೆ:

ಸನ್ಮಾನ್ಯ ಉಪ–ಲೋಕಾಯುಕ್ತರು ವಿಶ್ವಾಸನೀಯ ಮೂಲಗಳಿಂದ ಬಳ್ಳಾರಿ ಜಿಲ್ಲೆಯ ಹಗರಿ ತಾಲ್ಲೂಕಿನ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ನ ಕಚೇರಿಯಲ್ಲಿ ನಡೆಯುತ್ತಿರುವ ದುರಾಡಳಿತ ಮತ್ತು ಅಕ್ರಮಗಳ ಬಗೆಗೆ ಖಚಿತ ಮಾಹಿತಿಯನ್ನು ಸ್ವೀಕರಿಸಿರುತ್ತಾರೆ. ಆ ಮಾಹಿತಿಯ ಆಧಾರದ ಮೇಲೆ ಉಪಲೋಕಾಯುಕ್ತರು ಅಂಥ ದುರಾಡಳಿತ ಖಚಿತಪಡಿಸಿಕೊಳ್ಳುವುದಕ್ಕೋಸ್ಕರ ಕೆಲವು ತನಿಖೆಯನ್ನು ನಡೆಸಿರುತ್ತಾರೆ. ತನಿಖೆಗಳಿಂದ ಅಂಥ ವಿಶ್ವಾಸನೀಯ ಮಾಹಿತಿಯು ಅವರಿಗೆ ತೃಪ್ತಿಕರವಾಗಿರುವುದು ಕಂಡುಬಂದ ಪರಿಣಾಮ ದಿನಾಂಕ 27.08.2016 ರಂದು ಸಂ. ದೂರು/ಉ.ಲೋ/ಬಿಡಿ/ 1430/2016 ರಲ್ಲಿ ಮೊಕದ್ದಮೆಯನ್ನು ದಾಖಲಿಸಿಕೊಂಡಿರುತ್ತಾರೆ ಮತ್ತು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ 7(2)ನೇ ಮತ್ತು 9ನೇ ಪ್ರಕರಣವನ್ನು ಸಂಜ್ಞಾನಕ್ಕೆ ತಂದುಕೊಂಡು ಸ್ವಯಂಪ್ರೇರಿತವಾಗಿ ಶೋಧನಾ ವಾರೆಂಟನ್ನು ಜಾರಿಮಾಡಿರುತ್ತಾರೆ. ಸದರಿ ಶೋಧನಾ ವಾರಂಟನ್ನು ಮೇಲಿನ ಸದರಿ ಕಚೇರಿಗೆ ಅಗತ್ಯಪಡಿಸಿದಂತಹ ನೆರವಿನೊಂದಿಗೆ, ವಾರಂಟನ್ನು ಜಾರಿಮಾಡುವುದು ಅವಶ್ಯವೆನಿಸಿ ಯುಕ್ತಪಡೆಯೊಂದಿಗೆ ಶ್ರೀ ರವಿ ಕುಮಾರ್, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ಇವರು ಮೇಲಿನ ಸದರಿ ಕಚೇರಿಯನ್ನು ಜಪ್ತಿಮಾಡಿ ಅಧಿಕೃತವಾಗಿ ಸದರಿ ಶೋಧನಾ ವಾರೆಂಟನ್ನು ಹೊರಡಿಸಿರುತ್ತಾರೆ. ಮೇಲೆ ಹೇಳಲಾದ ಸದರಿ ಕಚೇರಿಯನ್ನು ಭಾಗಶಃ ಶೋಧನೆಮಾಡಿ ಜಪ್ತಿಗೊಳಿಸಲು ಮತ್ತು ತನಿಖೆಯ ಉದ್ದೇಶಕ್ಕಾಗಿ ಸಂಬಂಧಪಟ್ಟ ಕಡತಗಳನ್ನು ಮತ್ತು ದಸ್ತಾವೇಜುಗಳನ್ನು ಮತ್ತು ಸುಸಂಗತ ಇತರ ದಾಖಲೆಗಳನ್ನು, ಸ್ವಾಧೀನಪಡಿಸಿಕೊಳ್ಳಲು ಯಾರೇ ಸಿಬ್ಬಂದಿ/ಅಧಿಕಾರಿಯನ್ನು ಅಭಿರಕ್ಷಣೆಗೆ ತೆಗೆದುಕೊಳ್ಳಲು ಮತ್ತು ಆ ಕೂಡಲೇ ಅವರನ್ನು ಲೋಕಾಯುಕ್ತರ ಮುಂದೆ ಹಾಜರುಪಡಿಸುವ ಸಂಬಂಧದಲ್ಲಿ ಹಾಗೂ ಮುಂದಿನ ಕ್ರಮಗಳ ಜಾರಿಗಾಗಿ ಅಧಿಕೃತವಾಗಿ ಒಪ್ಪಿಗೆ ರುಜು ಪಡೆದಿರುವುದು ಇಲ್ಲಿ ಕಂಡುಬಂದಿರುತ್ತದೆ.

ಮೇಲಿನ ಸದರಿ ಶೋಧನ ವಾರೆಂಟಿನ ಆಧಾರದ ಮೇಲೆ, ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ಪೊಲೀಸ್ ಇನ್ಸ್‌ಪೆಕ್ಟರ್‌ರಾದ ಶ್ರೀ ಕೆ.ಆರ್. ಗೋಪಿಕೃಷ್ಣ ಅವರೊಂದಿಗೆ 23.08.2016 ರಂದು ಮುಂಜಾನೆ ಸುಮಾರು 5.00 ಗಂಟೆಯ

ಸಮಯದಲ್ಲಿ ಸದರಿ ಕಚೇರಿ ಎಂದರೆ ಬಳ್ಳಾರಿಯ ಹಗರಿಯ ಗುಂತ್ಕಲ್ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ನ ಸದರಿ ಕಚೇರಿಯ ಮೇಲೆ ದಾಳಿ ನಡೆಸಿರುವರು. ದಾಳಿಯ ಸಂದರ್ಭದಲ್ಲಿ ಅರ್ಜಿದಾರರು ಕಚೇರಿಯಲ್ಲಿಯೇ ಇದ್ದರು. ಅವರೆಲ್ಲರಿಗೂ ಉಪಲೋಕಾಯುಕ್ತರು ಶೋಧನೆ ನಡೆಸಲು ಹೊರಡಿಸಿದ ವಾರೆಂಟನ್ನು ತೋರಿಸಿದ ನಂತರ ಕಚೇರಿಯನ್ನು ಭಾಗಶಃ ಶೋಧನೆಮಾಡಲು ಉಪಕ್ರಮಿಸಲಾಗಿರುತ್ತದೆ. ಮೇಲಿನ ಸದರಿ ಶೋಧನಾ ಕಾರ್ಯಾಚರಣೆ ಮಾಡುತ್ತಿರುವ ಕಾಲಾವಧಿಯಲ್ಲಿ ಲೋಕಾಯುಕ್ತ ಪೊಲೀಸರಿಗೆ ಕಚೇರಿಯ ಗೊದ್ರೆಜ್ ಅಲ್ಮೆರಾದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಟ್ಟು 15,300/– ರೂಪಾಯಿಗಳು ಕಂಡುಬಂದಿರುತ್ತದೆ. ಅದನ್ನು ಸಹ ಲೋಕಾಯುಕ್ತ ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ವಶಪಡಿಸಿಕೊಂಡ ಸದರಿ ಮೊತ್ತಕ್ಕೆ ಸಂಬಂಧಪಟ್ಟಂತೆ ಅರ್ಜಿದಾರರು, ಸದರಿ ಕಚೇರಿಯ ತಪಾಸಣೆಮಾಡುವ ಮೂಲಕ ದಂಡದ ರೂಪದಲ್ಲಿ ಸಂಗ್ರಹಿಸಿದ ಮೊತ್ತವಾಗಿದೆ ಎಂದು ರಶೀದಿ ಪುಸ್ತಕವನ್ನು ಈ ಸಂಬಂಧದಲ್ಲಿ ಹಾಜರುಪಡಿಸಿರುತ್ತಾರೆ.

ಲೋಕಾಯುಕ್ತ ಪೊಲೀಸರು ಸದರಿ ಕಚೇರಿಯನ್ನು ಶೋಧನೆಮಾಡುವ ಕಾಲಾವಧಿಯಲ್ಲಿ ಕಂಪ್ಯೂಟರ್ ಮೇಜಿನ ಕಪಾಟಿನಲ್ಲಿ 1,450/– ರೂಪಾಯಿಗಳು ಇರುವುದು ಸಹ ಕಂಡುಬಂದಿರುತ್ತದೆ ಹಾಗೂ ಆ ಮೊತ್ತವನ್ನು ಸಹ ವಶಪಡಿಸಿಕೊಳ್ಳಲಾಗಿರುತ್ತದೆ. ಸದರಿ ಹಣದ ಬಗೆಗೆ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿದಾಗ ಅಲ್ಲಿಯ ಸಿಬ್ಬಂದಿ ಲೋಕಾಯುಕ್ತ ಪೊಲೀಸರಿಗೆ ಯಾವುದೇ ಯುಕ್ತವಾದ ಉತ್ತರವನ್ನು ನೀಡಿರುವುದಿಲ್ಲ. ಲೋಕಾಯುಕ್ತ ಪೊಲೀಸರು ಸದರಿ ಕಚೇರಿಯಲ್ಲಿ ರಶೀದಿ ಪುಸ್ತಕಗಳು ಮತ್ತು ಲಕೋಟೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಆದರೆ ರಶೀದಿ ಪುಸ್ತಕದಲ್ಲಿ ಏನನ್ನು ಲಿಖಿತದಲ್ಲಿ ನಮೂದಿಸಿರುವುದಿಲ್ಲ. ಹಾಗೂ ವಶಪಡಿಸಿಕೊಂಡ ಸದರಿ ಲಕೋಟೆಯನ್ನು ಪರಿಶೀಲಿಸಿದಾಗ 51 ಸ್ಟಾಂಪ್‌ಗಳು (ಭಾರತ ಧ್ವಜ) ಜೊತೆಯಲ್ಲಿ 140/– ರೂಪಾಯಿ ನಗದು ಇರುವುದು ಕಂಡುಬರುತ್ತದೆ. 1ನೇ ಸಂಖ್ಯೆಯ ಅರ್ಜಿದಾರನು ದಿನಾಂಕ 05.03.2016ರ ಪತ್ರದೊಂದಿಗೆ ಪ್ರತಿಯೊಂದು ಸ್ಟಾಂಪ್ 10 ರೂಪಾಯಿ ಮುಖಬೆಲೆಯ ಸುಮಾರು 400 ಸ್ಟಾಂಪ್‌ಗಳನ್ನು ಸಹ

ಹಾಜರುಪಡಿಸಿರುತ್ತಾನೆ ಆದರೆ ಆ ಎಲ್ಲಾ ಸ್ಟಾಂಪ್‌ಗಳು ಸಮಯೋಚಿತವಾಗಿರುತ್ತದೆ ಮತ್ತು ಸ್ಟಾಂಪ್‌ಗಳನ್ನು ಮಾರಾಟ ಮಾಡಿರುವುದಿಲ್ಲ. ಆದುದರಿಂದ ಲೋಕಾಯುಕ್ತ ಪೋಲೀಸರು ಒಟ್ಟು ಮೊತ್ತ 1,590/– ರೂಪಾಯಿಗಳನ್ನು ಮತ್ತು 51 ಹಳೆಯ ಸ್ಟಾಂಪ್‌ಗಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಕಚೇರಿಯಲ್ಲಿ ವಶಪಡಿಸಿಕೊಂಡ 1,590/– ರೂಪಾಯಿಗಳಿಗೆ ಸಿಬ್ಬಂದಿಯವರ ಯಾವುದೇ ಯುಕ್ತವಾದ ವಿವರಣೆಯನ್ನು ನೀಡಿರುವುದಿಲ್ಲ ಹಾಗೂ ಈ ಸಂಬಂಧದಲ್ಲಿ ಯಾವುದೇ ಯುಕ್ತವಾದ ವಿವರಣೆಯನ್ನು ನೀಡಿರುವುದಿಲ್ಲ ಹಾಗೂ ಈ ಸಂಬಂಧದಲ್ಲಿ ಯಾವುದೇ ರಶೀದಿಯನ್ನು ಹಾಜರುಪಡಿಸಿರದ ಕಾರಣ ಈ ಮೊತ್ತವು ಸಿಬ್ಬಂದಿಯೂ ಅಕ್ರಮವಾಗಿ ಸಂಗ್ರಹಿಸಿದ ಹಣವೆಂಬ ಸಂಶಯದಿಂದ ಕಚೇರಿಯ ತನಿಖೆಯ ಕಾಲಾವಧಿಯಲ್ಲಿ ಎಲ್ಲಾ ದಸ್ತಾವೇಜುಗಳನ್ನು ಜಪ್ತಿ ಮಾಡಲಾಗಿರುತ್ತದೆ.

ಲೋಕಾಯುಕ್ತ ಪೋಲೀಸರು ಮಾಡಿದ ಮೇಲಿನ ಪ್ರಾಥಮಿಕ ತನಿಖೆಯ ಆಧಾರದ ಮೇಲೆ ಮತ್ತು ಸನ್ಮಾನ್ಯ ಉಪಲೋಕಾಯುಕ್ತರು ಹೊರಡಿಸಿದ ಶೋಧನಾ ವಾರಂಟಿನ ಆಧಾರದ ಮೇಲೆ ಅರ್ಜಿದಾರರು ಸಂಗ್ರಹಿಸಿದ 1,590/– ರೂಪಾಯಿಗಳ ಮೊತ್ತವನ್ನು ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಸಾರ್ವಜನಿಕರಿಂದ ಅಕ್ರಮವಾಗಿ ಸಂಗ್ರಹಿಸಿದ ಮೊತ್ತ ಸಂಬಂಧದಲ್ಲಿ ಕಚೇರಿಯ ಸಿಬ್ಬಂದಿ ಯಾವುದೇ ಯುಕ್ತವಿವರಣೆ ನೀಡದ ಕಾರಣದಿಂದ ಸಂಶಯಕ್ಕೆಡೆ ಮಾಡಿಕೊಟ್ಟಿದೆ. ಆದುದರಿಂದ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)(ಡಿ), (i)(ii)(iii), 13(1)(ಇ) ಪ್ರಕರಣದ ಅಡಿಯಲ್ಲಿ 13(2)ನೇ ಪ್ರಕರಣದ ಉಪಬಂಧಗಳನ್ನು ಓದಿಕೊಳ್ಳುವುದರೊಂದಿಗೆ ಅರ್ಜಿದಾರರು ಅಪರಾಧದಕೃತ್ಯ ಎಸಗಿದ್ದಾರೆಂದು ತಿಳಿದುಬರುತ್ತದೆ.

4. ಅದರಂತೆ, ಬಳ್ಳಾರಿ ಜಿಲ್ಲೆಯ, ಕರ್ನಾಟಕ ಭ್ರಷ್ಟಾಚಾರ ನಿರೋಧ ಸಂಸ್ಥೆ ಬಳ್ಳಾರಿ ಇವರಿಗೆ ಲಗತ್ತಾಗಿರುವ ಪೋಲೀಸ್ ಇನ್ಸ್‌ಪೆಕ್ಟರ್ ಅವರು ಮೇಲಿನ ಸದರಿ ಅಪರಾಧದ ಸಂಬಂಧದಲ್ಲಿ ಅದರ ಆಧಾರದ ಮೇಲೆ ಕ್ರಿಮಿನಲ್ ಸಂ. 2/ 2016ರಲ್ಲಿ ಮೊಕದ್ದಮೆಯುನ್ನು ನೋಂದಾಯಿಸಿಕೊಂಡಿರುತ್ತಾರೆ. ಹೀಗೆ

ನೋಂದಾಯಿತವಾದ ಕ್ರಿಮಿನಲ್ ಅರ್ಜಿಯನ್ನು ವಜಾಮಾಡಬೇಕೆಂದು ಪ್ರಾರ್ಥಿಸಿ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

5. ಈ ನ್ಯಾಯಾಲಯದ ಮುಂದೆ ಅರ್ಜಿದಾರರ ಪರವಾದ ಮಾನ್ಯ ನ್ಯಾಯವಾದಿಗಳು, ಸರ್ಕಾರವು ದಿನಾಂಕ 19.03.2016 ರಂದು ಹೊರಡಿಸಿದ ಅಧಿಸೂಚನೆಯಲ್ಲಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದಡಿಯಲ್ಲಿ ಎಸಗಿದ ಅಪರಾಧಗಳನ್ನು ತನಿಖೆ ಮಾಡುವಂಥ ಅಧಿಕಾರವನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆಯೊಳಗೆ ನಿಹಿತಗೊಳಿಸಿರುವುದರಿಂದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಎಸಗಿದ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಉಪಲೋಕಾಯುಕ್ತರು ಹೊರಡಿಸಿದ ಶೋಧನಾ ವಾರೆಂಟಿನ ಆಧಾರದ ಮೇಲೆ ಲೋಕಾಯುಕ್ತ ಪೊಲೀಸರು ಶೋಧನೆ ನಡೆಸುವ ಅಧಿಕಾರದ ವ್ಯಾಪ್ತಿಯನ್ನು ಹೊಂದಿಲ್ಲವೆಂಬ ಗಂಭೀರವಾದ ವಾದಾಂಶವನ್ನು ಎತ್ತಿಹಿಡಿದಿರುವರು. ಎರಡನೆಯದಾಗಿ, ಅವರು ವಾದವನ್ನು ಮುಂದುವರೆಸುತ್ತಾ ಲೋಕಾಯುಕ್ತ ಪೊಲೀಸರಿಗೆ ಇರುವ ಆ ಯಾವುದೇ ಅಧಿಕಾರವ್ಯಾಪ್ತಿ ಇದ್ದರೆ ಅದನ್ನು ಖಚಿತಪಡಿಸಬೇಕೆಂದು, ಅವರು ತನಿಖೆಮಾಡುವ ಮುಂಚೆಯೇ ಮೊಕದ್ದಮೆಯನ್ನು ನೋಂದಾಯಿಸಲು ಅವರು ಹೊಂದಿರುವ ಅಧಿಕಾರವ್ಯಾಪ್ತಿಯನ್ನು ಸ್ಪಷ್ಟಪಡಿಸಬೇಕೆಂದು ಈ ನ್ಯಾಯಾಲಯದ ಮುಂದೆ ನಿವೇದಿಸಿರುತ್ತಾರೆ. ಆದುದರಿಂದ, ಲೋಕಾಯುಕ್ತ ಪೊಲೀಸರು ಯಾವುದೇ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸದ ಹೊರತು, ಅವರು ಅಧಿಕಾರವ್ಯಾಪ್ತಿಯನ್ನು ಮೀರಿ ಶೋಧನೆ, ಜಪ್ತಿ ಮತ್ತು ತನಿಖೆಯನ್ನು ಮಾಡಿರುತ್ತಾರೆ ಎಂಬುದು ನ್ಯಾಯವಾದಿಗಳ ವಾದಾಂಶವಾಗಿರುತ್ತದೆ. ಮೂರನೆಯದಾಗಿ, ಅರ್ಜಿದಾರರ ನ್ಯಾಯವಾದಿಗಳು ಈ ನ್ಯಾಯಾಲಯದ ಮುಂದೆ ಲೋಕಾಯುಕ್ತ ಪೊಲೀಸರು ಅರ್ಜಿದಾರರ ಸದರಿ ಕಚೇರಿಯ ಸ್ಥಳವನ್ನು ವಶಪಡಿಸಿಕೊಂಡು, ಪರಿಶೀಲಿಸುವ ಸಮಯದಲ್ಲಿ ಅರ್ಜಿದಾರರು ಕೆಲವು ಅಪರಾಧ ಎಸಗಿರುವುದು ಆ ಸಮಯದಲ್ಲಿ ಸ್ವತಃ ಕಂಡುಬಂದಾಗಲು, ಅವರು ಭ್ರಷ್ಟಾಚಾರ ನಿರೋಧ ಸಂಸ್ಥೆಗೆ ತನಿಖೆಯನ್ನು ವಹಿಸಿಕೊಡದೇ, ಅವರು ಶೋಧನೆ ಮತ್ತು ಜಪ್ತಿಯನ್ನು ಮುಂದುವರಿಸಿರುತ್ತಾರೆ ಮತ್ತು ತದನಂತರದಲ್ಲಿ ಸಾಕಷ್ಟು ಕಾಲದ ವಿಳಂಬದ ನಂತರದಲ್ಲಿ

ದಿನಾಂಕ: 17.09.2016 ರಂದು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿರುತ್ತಾರೆ. ಅಂದರೆ 25 ದಿನಗಳ ವಿಳಂಬವಾಗಿ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರಿಗೆ ಸದರಿ ಪ್ರಥಮ ಮಾಹಿತಿ, ವರದಿಯನ್ನು ಸಲ್ಲಿಸಿರುತ್ತಾರೆ ಎಂದು ವಾದಾಂಶದಲ್ಲಿ ನಿವೇದಿಸಿರುವರು. ನ್ಯಾಯವಾದಿಗಳು ತಮ್ಮ ವಾದವನ್ನು ಮುಂದುವರೆಸುತ್ತಾ, ಲೋಕಾಯುಕ್ತ ಪೊಲೀಸರು ಮೇಲಿನ ಸದರಿ ಮಾಹಿತಿಯ ಆಧಾರದ ಮೇಲೆ ಮೊಕದ್ದಮೆಯನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆ ಪೊಲೀಸರು ತಪ್ಪಾಗಿ ನೋಂದಾಯಿಸಿಕೊಂಡಿರುವರು ಮತ್ತು ಲೋಕಾಯುಕ್ತ ಪೊಲೀಸರು ಸ್ವತಃ ಸಂಪೂರ್ಣಗೊಳಿಸಿದ ತನಿಖೆಯನ್ನು ಮತ್ತಷ್ಟು ತನಿಖೆಯನ್ನು ಮುಂದುವರೆಸುವುದಕ್ಕೆ ಭ್ರಷ್ಟಾಚಾರ ನಿರೋಧ ಸಂಸ್ಥೆಗೆ ಯಾವುದೇ ಅಧಿಕಾರವ್ಯಾಪ್ತಿಯಾಗಲೀ, ಅಧಿಕಾರವಾಗಲೀ ಇರುವುದಿಲ್ಲ ಎಂದು ವಾದಾಂಶದಲ್ಲಿ ನಿವೇದಿಸಿರುವರು.

6. ಈ ಸಂಬಂಧದಲ್ಲಿ ಮಾನ್ಯ ನ್ಯಾಯವಾದಿಗಳು ವಿವಿಧ ನಿರ್ಣಯಗಳನ್ನು ಅವಲಂಬನೆಯಾಗಿ ನೀಡಿರುವರು. ನಾನು ಸ್ವಲ್ಪ ತರುವಾಯದಲ್ಲಿ ಅವುಗಳನ್ನು ಪರಿಗಣಿಸಲು ಇಚ್ಛಿಸುತ್ತೇನೆ.

7. ಇದಕ್ಕೆ ವಿರೋಧವಾಗಿ, ಪ್ರತ್ಯರ್ಜಿದಾರ ಲೋಕಾಯುಕ್ತ ಸಂಸ್ಥೆಯ ಪರವಾಗಿ ಹಾಜರಾದ ನ್ಯಾಯವಾದಿಗಳು, ಕರ್ನಾಟಕ ಲೋಕಾಯುಕ್ತ ಅಧಿನಿಯಮದ 10ನೇ ಪ್ರಕರಣದ ಉಪಬಂಧದಂತೆ ಉಪಲೋಕಾಯುಕ್ತರು ವಾರೆಂಟುಗಳನ್ನು ಜಾರಿಮಾಡುವುದಕ್ಕೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವರು ಎಂದು ನಿವೇದಿಸಿರುವರು. ಉಪಲೋಕಾಯುಕ್ತರು ನಿರ್ದೇಶಿಸಿದಂತೆ ದುರಾಡಳಿತವನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಮಾತ್ರವೇ ಲೋಕಾಯುಕ್ತ ಪೊಲೀಸರು ಅವರ ಕರ್ತವ್ಯವನ್ನು ನೆರವೇರಿಸಿರುತ್ತಾರೆ, ಹಾಗೂ ದುರಾಡಳಿತದಂಥ ತನಿಖೆಯನ್ನು ನಡೆಸುವಂತೆಯೇ ಅವರು ತನಿಖೆಯನ್ನು ನಡೆಸಿರುತ್ತಾರೆ. ಅರ್ಜಿದಾರರು ಎಸಗಿದ ಅಪರಾಧವನ್ನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಬರುತ್ತದೆ ಎಂದು ಸಂಶಯವನ್ನು ವ್ಯಕ್ತಪಡಿಸಿರುತ್ತಾರೆ. ಶೋಧನೆ ಮತ್ತು ಜಪ್ತಿ ಮಾಡಿದ ನಂತರ ಅದನ್ನು ಗಮನಕ್ಕೆ

ತಂದುಕೊಳ್ಳುವಲ್ಲಿ ವಿಳಂಬಕ್ಕೆ ಕಾರಣವಾಗಿರುತ್ತದೆ. ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರಿಗೆ ಪ್ರಥಮ ಮಾಹಿತಿ ವರದಿಯನ್ನು ಕ್ರಮವಾಗಿ ಸಲ್ಲಿಸಿರುವುದು ಸರಿಯಾದುದಾಗಿದೆ. ಆದುದರಿಂದ, ಇಡೀ ಪ್ರಕ್ರಿಯೆಯಾ ದುರಾಡಳಿತವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮಾತ್ರವೇ ಲೋಕಾಯುಕ್ತ ಪೊಲೀಸರು ಪ್ರಾಥಮಿಕ ತನಿಖೆಯನ್ನು ನಡೆಸಿರುವರು. ಆದುದರಿಂದಲೇ ಅಧಿಕಾರವ್ಯಾಪ್ತಿಯ ಹೊರತುಪಡಿಸಿ ನಡೆಸಿದ ತನಿಖೆ ಎಂಬ ಪ್ರಶ್ನೆಯೇ ಇಲ್ಲಿ ಉಂಟಾಗುವುದಿಲ್ಲ ಎಂದು ನಿವೇದಿಸಿರುವರು.

8. ಮಾನ್ಯ ನ್ಯಾಯವಾದಿಗಳು ವಾದವನ್ನು ಮುಂದುವರೆಸುತ್ತಾ, ಸರ್ಕಾರವು ದಿನಾಂಕ 19.03.2016 ರಂದು ಹೊರಡಿಸಿದ ಅಧಿಸೂಚನೆಯಲ್ಲಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ತನಿಖೆಮಾಡಲು ಲೋಕಾಯುಕ್ತ ಪೊಲೀಸರಿಗೆ ಅಧಿಕಾರವ್ಯಾಪ್ತಿ ಇರುವುದಿಲ್ಲ ಎಂದು ಉಲ್ಲೇಖಿಸಿರುತ್ತದೆ. ಆದುದರಿಂದ ಪ್ರಥಮ ಮಾಹಿತಿ ವರದಿ ನೋಂದಾಯಿತವಾದ ತರುವಾಯ ವಸ್ತುವಿಷಯವನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಈ ನ್ಯಾಯಾಲಯದ ಮುಂದೆ ಅದನ್ನು ಪ್ರಶ್ನಿಸಲಾಗಿರುತ್ತದೆ. ಆದ್ದರಿಂದ ಲೋಕಾಯುಕ್ತ ಪೊಲೀಸರಾಗಲೀ ಅಥವಾ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರಾಗಲೀ ಕಾನೂನು ಬಾಹಿರ ಅಥವಾ ಅಕ್ರಮ ಕೃತ್ಯವನ್ನು ಎಸಗಿರುವುದಿಲ್ಲ. ಆದುದರಿಂದ, ಈ ಹಂತದಲ್ಲಿ ಯಾವುದೇ ಬಲವಾದ ಕಾರಣವಿಲ್ಲದೆ ಈ ಹಂತದಲ್ಲಿ ತನಿಖೆಯನ್ನು ಮೊಟುಕುಗೊಳಿಸದೇ ಅಪರಾಧದ ತನಿಖೆಯನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆಗೆ ಕೊಡಲು ಸೂಚಿಸುವ ಶಾಸನಾತ್ಮಕ ಅಧಿಕಾರವೂ ಇರುವುದಿಲ್ಲ ಎಂದು ವಾದಿಸಿರುವರು. ಆದುದರಿಂದಲೇ ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ಅವರು ಕೋರಿರುತ್ತಾರೆ.

9. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ದೃಷ್ಟಾಂತವಾಗಿ ನೀಡಿದ ನಿರ್ಣಯಗಳನ್ನು ಈಗ ಪರೀಕ್ಷಿಸಲು ಈ ಮೊಕದ್ದಮೆಯಲ್ಲಿ ವಾಸ್ತವಿಕವಾಗಿ ನಿರ್ಣಯಗಳು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಪರಿಶೀಲಿಸೋಣ.

10. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯದ ಮೊಕದ್ದಮೆಗೆ ಸಂಬಂಧಿಸಿದ ಅವಲಂಬನೆಯಾಗಿ ನೀಡಿದ ನಿರ್ಣಯಗಳು: (1) ***ಎಲ್. ಶಂಕರಮೂರ್ತಿ –ವಿರುದ್ಧ– ರಾಜ್ಯ ಲೋಕಾಯುಕ್ತ ಪೋಲೀಸರು***[1] ಮತ್ತು (2) ***ಗಿರೀಶ್ ಚಂದ್ರ ಮತ್ತು ಮತ್ತೊಬ್ಬರು –ವಿರುದ್ಧ– ರಾಜ್ಯ ಲೋಕಾಯುಕ್ತ ಪೋಲೀಸರು ಯಾದಗಿರಿ***[2]. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯವನ್ನು ಆಯೋಗಕ್ಕೆ ಯಾವುದೇ ಸಂಜ್ಞೇಯ ಅಪರಾಧದ ಸಂಬಂಧದಲ್ಲಿ ವಿಶ್ವಾಸಾರ್ಹ ಮಾಹಿತಿಯನ್ನು ಸ್ವೀಕರಿಸಿ ಆ ಸಂಬಂಧದಲ್ಲಿ ತನಿಖೆಮಾಡುವುದಕ್ಕೆ ತನಿಖಾಧಿಕಾರಿಯನ್ನು ನೇಮಕಮಾಡಿದಾಗ, ಹಾಗೇ ನೇಮಕಗೊಂಡ ತನಿಖಾಧಿಕಾರಿಯು ಅಪರಾಧವನ್ನು ಮೊದಲು ನೋಂದಾಯಿಸಿ ತನ್ನ ಕರ್ತವ್ಯವನ್ನು ನಿರ್ವಹಿಸಿದ ನಂತರವೇ ಅವನು ತನಿಖೆಯ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿತ್ತು ಎಂಬುದನ್ನು ಈ ನ್ಯಾಯಾಲಯಕ್ಕೆ ಮನಗಾಣಿಸುವ ದೃಷ್ಟಿಯಿಂದ ಅರ್ಜಿದಾರರ ಈ ಕೆಲವೊಂದು ನಿರ್ಣಯಗಳನ್ನ ಅವಲಂಬನೆಯಾಗಿ ನೀಡಿರುವರು. ತನಿಖಾಧಿಕಾರಿ ಮೊದಲು ತನಿಖೆಯಲ್ಲಿ ತೊಡಗಿ ತದನಂತರದಲ್ಲಿ ಮೊಕದ್ದಮೆಯನ್ನು ನೋಂದಾಯಿಸಿ ವಸ್ತುಗಳನ್ನು ಜಪ್ತಿಮಾಡಿರುವಂಥದ್ದು ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾದಂಥ ತನಿಖೆಯಾಗಿರುತ್ತದೆ ಮತ್ತು ಇದು ಗಂಭೀರವಾದ ಕ್ರಿಯಾಲೋಪವಾಗಿಲ್ಲ ಕಂಡುಬರುತ್ತದೆ. ಆದುದರಿಂದ ಒಟ್ಟಾರೆಯಾಗಿ ಕಾನೂನು ಬಾಹಿರವಾದಂಥ ವ್ಯವಹರಣೆಗಳನ್ನು ವಜಾಮಾಡಬೇಕೆಂದು ನಿವೇದಿಸಿರುವರು. ಮೇಲಿನ ಸದರಿ ತತ್ವಗಳಲ್ಲಿ ವಿವಾದವಿರುವುದಿಲ್ಲ.

11. ಮೊಕದ್ದಮೆಯನ್ನು ನೋಂದಣಿ ಮಾಡುವುದಕ್ಕೆ ಮುಂಚಿತವಾಗಿ ಮಾಡಿದ ಪ್ರಾಥಮಿಕ ತನಿಖೆಯೂ ದೋಷ ಪೂರ್ಣವಾಗಿಲ್ಲದಿರುವುದನ್ನು ವಿಭಿನ್ನ ನಿರ್ಣಯಗಳು ಸ್ಪಷ್ಟವಾಗಿ ಹೇಳುತ್ತವೆ ಮತ್ತು ಅಗತ್ಯಪಡಿಸಿದ ಪ್ರಾಥಮಿಕ ತನಿಖೆಯನ್ನು ಮಾಡಬೇಕಾದ ಆ ಪ್ರತಿಯೊಂದು ಮೊಕದ್ದಮೆಯ ಅಡಿಯಲ್ಲಿನ ಸಂಗತಿಗಳು ಮತ್ತು ಸನ್ನಿವೇಶಗಳ ಮೇಲೆ ಅವಲಂಬಿತವಾಗಿರುವ ಎಲ್ಲವುಗಳನ್ನು ಪರಿಗಣಿಸಲು

1. 2012(5) ಕೆಎಲ್‌ಜೆ 545 2. 2013(5) ಕೆಎಲ್‌ಜೆ 470(ಡಿಬಿ)

ಸಹ ಈ ವಿವಿಧ ನಿರ್ಣಯಗಳು ಅತ್ಯಗತ್ಯವಾಗಿ ಬೇಕಾಗುತ್ತದೆ. ಕೊನೆಯದಾಗಿ, ಘನ ಸರ್ವೋಚ್ಚ ನ್ಯಾಯಾಲಯ ***ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ***[3], ಮೊಕದ್ದಮೆಯ ನಿರ್ಣಯದಲ್ಲಿ, ಮೊಕದ್ದಮೆ ನೋಂದಣಿಯಾಗುವ ಮುಂಚೆ ಪ್ರಾಥಮಿಕ ತನಿಖೆಯೂ ಪುರಸ್ಕರಿಸುವುದಕ್ಕೆ ಇರಬೇಕಾದಂತಹ ಸನ್ನಿವೇಶಗಳ ದೃಷ್ಟಿಯಲ್ಲಿ ನಿರ್ದಿಷ್ಟ ತತ್ವಗಳನ್ನು ಮಂಡಿಸಿದೆ. ಆ ನಿರ್ದಿಷ್ಟ ತತ್ವಗಳು ನಿರ್ಣಯದ 12ನೇ ಪ್ಯಾರಾಗ್ರಫ್‌ನಲ್ಲಿದೆ ಸರ್ವೋಚ್ಚ ನ್ಯಾಯಾಲಯ ಈ ವಸ್ತುವಿಷಯದ ಬಗ್ಗೆ ಸ್ಪಷ್ಟವಾಗಿ ಕೆಲವು ನಿರ್ಧಾರಾತ್ಮಕ ನಿರ್ದೇಶನಗಳನ್ನು ಮಂಡಿಸಿದೆ. ಅದು ಈ ಕೆಳಗಿನಂತಿದೆ:

> ‘‘ನಿರ್ಧಾರಾತ್ಮಕ ನಿಲುವುಗಳು/ನಿರ್ದೇಶನಗಳು:
>
> 111. ಮೇಲೆ ಮಾಡಿದ ಚರ್ಚೆಯ ದೃಷ್ಟಿಯಲ್ಲಿ ನಮ್ಮ ನಿರ್ಣಯವು ಹೀಗಿದೆ:
>
> (1) ಸಂಹಿತೆಯ 154ನೇ ಪ್ರಕರಣದ ಅಡಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ನೋಂದಣಿ ಮಾಡುವುದು ಕಡ್ಡಾಯವಾಗಿದೆ. ಸಂಜ್ಞೇಯ ಅಪರಾಧ ಸಮಿತಿಯು ಮಾಹಿತಿಯನ್ನು ಬಹಿರಂಗಗೊಳಿಸಿದ್ದರೆ ಮತ್ತು ಅಂಥ ಸನ್ನಿವೇಶದಲ್ಲಿ ಪ್ರಾಥಮಿಕ ತನಿಖೆಯನ್ನು ನಡೆಸಲು ಅನುಮತಿಸಬಾರದು.
>
> (2) ಸಂಜ್ಞೇಯವಾದ ಅಪರಾಧವೆಂದು ಬಹಿರಂಗವಾಗದಿರುವ ಮಾಹಿತಿಯನ್ನು ಸ್ವೀಕರಿಸಿದ್ದರೆ ಹಾಗೂ ತನಿಖೆಯೂ ಅವಶ್ಯವೆಂದು ಸೂಚಿಸಿದ್ದಾನೆ. ಸಂಜ್ಞೇಯ ಅಪರಾಧವೆಂದು ಬಹಿರಂಗವಾಗಿರಲಿ

3. (2013) 8 ಎಸ್‌ಸಿ 1

ಅಥವಾ ಬಹಿರಂಗವಾಗದಿರಲಿ ಅಪರಾಧವನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮಾತ್ರವೇ ಪ್ರಾಥಮಿಕ ತನಿಖೆಯನ್ನು ನಡೆಸಬಹುದಾಗಿದೆ.

(3) ಸಂಜ್ಞೇಯ ಅಪರಾಧದ ಸಮಿತಿ ತನಿಖೆಯನ್ನು ಬಹಿರಂಗಗೊಳಿಸದಿದ್ದರೆ. ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಲೇ ಬೇಕಾಗುತ್ತದೆ. ದೂರನ್ನು ಪೂರ್ಣಗೊಳಿಸುವ ಸಲುವಾಗಿ ಪ್ರಾಥಮಿಕ ತನಿಖೆಯು ಮುಕ್ತಾಯಗೊಂಡ ಮೊಕದ್ದಮೆಗಳಲ್ಲಿ ತತ್‌ಕ್ಷಣವೇ ಮತ್ತು ಒಂದು ವಾರಕ್ಕಿಂತ ಹೆಚ್ಚಿಲ್ಲದ ಅವಧಿಯೊಳಗಾಗಿ ಪ್ರಥಮ ಮಾಹಿತಿಗೆ ಆ ಮಾಹಿತಿಯನ್ನು ಕಳುಹಿಸಿ ಅಂಥ ಮುಕ್ತಾಯದ ನಮೂನೆಗಳನ್ನು ದಾಖಲಿಸಿದ ಪ್ರತಿಯನ್ನು ಪಡೆದುಕೊಳ್ಳಬೇಕು. ಪ್ರತಿಯಲ್ಲಿ ದೂರು ಮುಕ್ತಾಯವಾಗುವುದಕ್ಕಾಗಿ ಸಂಕ್ಷಿಪ್ತವಾಗಿ ಕಾರಣಗಳನ್ನು ಬಹಿರಂಗಗೊಳಿಸಿರಬೇಕು ಮತ್ತು ಹೆಚ್ಚಿನ ವ್ಯವಹರಣೆಗಳನ್ನು ಬಹಿರಂಗಗೊಳಿಸಬಾರದು.

(4) ಪೊಲೀಸ್ ಅಧಿಕಾರಿ, ಬಹಿರಂಗಗೊಂಡ ಸಂಜ್ಞೇಯ ಅಪರಾಧವಾಗಿದ್ದರೆ ಅಂತಹ ಅಪರಾಧವನ್ನು ನೋಂದಾಯಿಸುವ ಕರ್ತವ್ಯದಿಂದ ಅವನು ತಪ್ಪಿಸಿಕೊಳ್ಳಬಾರದು. ಮಾಹಿತಿಯನ್ನು ಸ್ವೀಕರಿಸಿದ್ದರೂ, ಆದರೆ ಯಾವುದೇ ಸಂಜ್ಞೇಯ ಅಪರಾಧದ ಬಹಿರಂಗಗೊಂಡ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮಾತ್ರವೇ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಿಕೊಳ್ಳದಿರುವ ತಪ್ಪನ್ನು ಎಸಗಿದ ಅಧಿಕಾರಿಯ ವಿರುದ್ಧ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

(5) ಪ್ರಾಥಮಿಕ ತನಿಖೆಯ ವ್ಯಾಪ್ತಿಯ ಸತ್ಯತೆಯನ್ನು ಪ್ರಮಾಣಿಕರಿಸದಿರುವುದು ಅಥವಾ ಬಹಿರಂಗಗೊಂಡ ಯಾವುದೇ ಸಂಜ್ಞೇಯ ಅಪರಾಧದ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮಾತ್ರವೇ ಅನ್ಯಥಾ ಮಾಹಿತಿಯನ್ನು ಸ್ವೀಕರಿಸುವುದು.

(6) ಪ್ರತಿಯೊಂದು ಮೊಕದ್ದಮೆಯ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ಅವಲಂಬಿಸಿ ಯಾವ ವಿಧದಲ್ಲಿ ಮತ್ತು ಆ ಯಾವುದೇ ಮೊಕದ್ದಮೆಗಳಿಗೆ ಪ್ರಾಥಮಿಕ ತನಿಖೆಯನ್ನು ನಡೆಸಬೇಕಾಗತ್ತದೆ. ಪ್ರಾಥಮಿಕ ತನಿಖೆಯನ್ನು ಈ ಕೆಳಗಿನ ಪ್ರವರ್ಗದ ಮೊಕದ್ದಮೆಗಳಿಗೆ ಮಾಡಬೇಕಾಗುತ್ತದೆ ಎಂದರೆ:

(ಎ) ವೈವಾಹಿಕ ವಿವಾದಗಳು/ಕುಟುಂಬ ವಿವಾದಗಳು.

(ಬಿ) ವಾಣಿಜ್ಯ ಅಪರಾಧಗಳು.

(ಸಿ) ವೈದ್ಯಕೀಯ ನಿರ್ಲಕ್ಷತೆ ಮೊಕದ್ದಮೆಗಳು

(ಡಿ) ಭ್ರಷ್ಟಾಚಾರ ಮೊಕದ್ದಮೆಗಳು

(ಇ) ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಲು ಅಸಾಮಾನ್ಯ ವಿಳಂಬತೆ/ಅಸಮರ್ಥನೀಯ ವಿಳಂಬತೆಯಾಗಿರುವ ಮೊಕದ್ದಮೆಗಳು ಉದಾ: ವಸ್ತುವಿಷಯ ವರದಿಯಾಗಿ 3 ತಿಂಗಳು ಮೀರಿದ ವಿಳಂಬತೆ, ಹಾಗೂ ವಿಳಂಬತೆಗೆ ತೃಪ್ತಿಕರವಾದ ಕಾರಣಗಳನ್ನು ನೀಡದ ಮೊಕದ್ದಮೆಗಳು."

12. ಮೇಲೆ ಹೇಳಲಾದ ಮಾರ್ಗಸೂಚಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಂಜ್ಞೇಯ ಅಪರಾಧದ ಆಯೋಗವು ಬಹಿರಂಗ ಮಾಡಿದ ಮಾಹಿತಿ ಇದ್ದರೆ ಸಂಹಿತೆಯ 154ನೇ ಪ್ರಕರಣದ ಅಡಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ಪ್ರಸ್ತುತ ಮೊಕದ್ದಮೆಗೆ ಮೇಲಿನ ಸುಸಂಗತ ಮಾರ್ಗಸೂಚಿಯನ್ನು ಅನ್ವಯಿಸಿಕೊಳ್ಳಬಹುದಾಗಿದೆ ಮತ್ತು ಬಹಿರಂಗಗೊಳ್ಳದಿರುವ ಸಂಜ್ಞೇಯ ಅಪರಾಧದ ಸಂದರ್ಭದಲ್ಲಿ (2)ನೇ ಸನ್ನಿವೇಶದಂಥ ಮಾಹಿತಿಯನ್ನು ಸ್ವೀಕರಿಸಿದ್ದರೆ ಪ್ರಾಥಮಿಕ ತನಿಖೆಯನ್ನು ನಡೆಸಲು ಅನುಮತಿಸಬಾರದು ಆದರೆ ತನಿಖೆ ನಡೆಸುವುದು ಅವಶ್ಯವಾಗಿದ್ದಾಗ ಮಾತ್ರವೇ ಸೂಚಿಸಬೇಕಾಗುತ್ತದೆ

ಅಂದರೆ ಸಂಜ್ಞೇಯ ಅಪರಾಧವನ್ನು ಎಸಗಲಾಗಿದೆಯೇ ಅಥವಾ ಎಸಗಲಾಗಿಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಪ್ರಾಥಮಿಕ ತನಿಖೆಯನ್ನು ನಡೆಸಲು ಅವಕಾಶ ಮಾಡಿಕೊಡಬಹುದೇ?

13. ಮೇಲೆ ಹೇಳಲಾದ ಮಾರ್ಗಸೂಚಿಯ ಆಧಾರದಮೇಲೆ, ಸಂಜ್ಞೇಯ ಅಪರಾಧದ ಆಯೋಗ ತನಿಖೆಯನ್ನು ಬಹಿರಂಗಪಡಿಸಿರುವುದು ಸ್ಪಷ್ಟವಾಗಿದ್ದರೆ ಅಪರಾಧವನ್ನು ನೋಂದಣಿ ಮಾಡಬೇಕು ಮತ್ತು ಬಹಿರಂಗಗೊಂಡ ಸಂಜ್ಞೇಯ ಅಪರಾಧವಾಗಿದ್ದರೆ ಪೊಲೀಸ್ ಅಧಿಕಾರಿ ನೋಂದಣಿ ಮಾಡುವ ಕರ್ತವ್ಯದಿಂದ ಅವನು ತಪ್ಪಿಸಿಕೊಳ್ಳಬಾರದು. ಆದಾಗ್ಯೂ, ಸಂಜ್ಞೇಯ ಅಪರಾಧದ ಸಂಬಂಧದಲ್ಲಿ ಆಯೋಗಕ್ಕೆ ಯಾವುದೇ ಸಿಬ್ಬಂದಿ ಅಥವಾ ಸಂಸ್ಥೆಯ ಮೇಲೆ ಸಂದೇಹವಿದ್ದರೆ ಮತ್ತು ಸಂಜ್ಞೇಯ ಅಪರಾಧವನ್ನು ಆಯೋಗದ ತನಿಖಾಧಿಕಾರಿಯು ನಿರ್ದಿಷ್ಟ ಖಚಿತತೆಗೆ ಬರಬಾರದು. ಅವನು ಪ್ರಾಥಮಿಕ ತನಿಖೆಯನ್ನು ನಡೆಸಬೇಕಾಗುತ್ತದೆ ಆದರೆ ಪ್ರಾಥಮಿಕ ತನಿಖೆಯ ವ್ಯಾಪ್ತಿಯ ಸತ್ಯತೆಯನ್ನು ಪ್ರಮಾಣೀಕರಿಸಬಾರದು ಅಥವಾ ಅನ್ಯಥಾ ಯಾವುದೇ ಸಂಜ್ಞೇಯ ಅಪರಾಧದ ಮಾಹಿತಿ ಬಹಿರಂಗಗೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಮಾತ್ರವೇ ಮಾಹಿತಿಯನ್ನು ಸ್ವೀಕರಿಸುವುದು.

14. ಮಾನ್ಯ ನ್ಯಾಯವಾದಿಗಳು ಮೇಲಿನ ಸದರಿ ನಿರ್ಣಯಗಳನ್ನು ಅವಲಂಬನೆಯಾಗಿ ನೀಡಿರುವರು ಅದರಂತೆ, ನನ್ನ ಅಭಿಪ್ರಾಯದಲ್ಲಿ ಮೇಲಿನ ಸದರಿ ನಿರ್ಣಯಗಳು ಮಾನ್ಯ ನ್ಯಾಯವಾದಿಗಳು ಹೇಳಿದ ಸಂಗತಿಗಳಿಗೆ ಅನುಸಾರವಾಗಿ ಅಂದರೆ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ಅಡಿಯಲ್ಲಿ ಆಪಾದಿಸಲಾದ ಅಪರಾಧಗಳನ್ನು ಲೋಕಾಯುಕ್ತ ಪೊಲೀಸರು ತನಿಖೆ ನಡೆಸುವುದಕ್ಕಾಗಲೀ ಅಥವಾ ಮೊಕದ್ದಮೆಯನ್ನು ನೋಂದಾಯಿಸುವುದಕ್ಕಾಗಲೀ ಅಧಿಕಾರವ್ಯಾಪ್ತಿಯನ್ನು ಹೊಂದಿಲ್ಲ ಎಂಬ ಸಂಗತಿಗಳು, ಈ ನಿರ್ದಿಷ್ಟ ಮೊಕದ್ದಮೆಯ ಸಂಗತಿಗಳಿಗೆ ಸರಿಯಾದ ಹೊಂದಾಣಿಕೆಯಾಗುವುದಿಲ್ಲ. ಆದುದರಿಂದ, ಲೋಕಾಯುಕ್ತ ಪೊಲೀಸರು ನಡೆಸಿದ ಪ್ರಾಥಮಿಕ ತನಿಖೆಯನ್ನು ನಿರರ್ಥಕಗೊಳಿಸುವುದು ಮತ್ತು ಭ್ರಷ್ಟಾಚಾರ ನಿರೋಧ

ಸಂಸ್ಥೆಯು ತನಿಖೆಯ ಆನಂತರ ಮೊಕದ್ದಮೆಯನ್ನು ನೋಂದಾಯಿಸಿರುವುದು ಸಹ ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾದುದಾಗಿದೆ. ಈ ಹಿನ್ನೆಲೆಯಲ್ಲಿ, ನಾನು ಇಲ್ಲಿ ಲೋಕಾಯುಕ್ತ ಪೊಲೀಸರು ಯಾವುದೇ ಕಾನೂನಿನ ಅಡಿಯಲ್ಲಿ ಅನುಮತಿಸಬಹುದಾಂಥ ತನಿಖೆಯನ್ನು ನಡೆಸಿರುವುದನ್ನು ಮತ್ತು ತನಿಖೆಯ ನಂತರ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಮುಂದೆ ಯುಕ್ತವಾಗಿ ಮತ್ತು ಸರಿಯಾಗಿ ವರದಿಯನ್ನು ದಾಖಲಿಸಿರುವುದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇನೆ.

15. ಸರ್ಕಾರವು ದಿನಾಂಕ 19.03.2016 ರಂದು ಹೊರಡಿಸಿದ ಅಧಿಸೂಚನೆಯ ಬಲದಿಂದಾಗಿ ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ವಸ್ತುವಿಷಯವನ್ನು ತನಿಖೆ ಮಾಡುವುದಕ್ಕೆ ಯಾವುದೇ ಮೊಕದ್ದಮೆಯನ್ನು ನೋಂದಾಯಿಸುವುದಕ್ಕೆ ಅಧಿಕಾರವ್ಯಾಪ್ತಿ ಹೊಂದಿರುವುದಿಲ್ಲ ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ಸರ್ಕಾರವು ಸದರಿ ಅಧಿಕಾರವನ್ನು ಲೋಕಾಯುಕ್ತ ಪೊಲೀಸರಿಂದ ದಿನಾಂಕ 19.03.2016ರ ಅಧಿಸೂಚನೆ ಸಂ. ಹೆಚ್‌ಡಿ 71/ಪಿಒಎಸ್‌ಐಪಿಎ (iv) 2016, ದಿನಾಂಕ 09.03.2016 ರಂದು ಹಿಂಪಡೆದುಕೊಂಡಿದೆ, ಸರ್ಕಾರವು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1973ರ 2ನೇ ಪ್ರಕರಣದ (ಎಸ್) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಬೆಂಗಳೂರಿನಲ್ಲಿರುವ ಎಡಿಜಿಪಿಯ ಕಚೇರಿಯೇ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸ್ ಠಾಣೆಯಾಗಿರುತ್ತದೆ ಅದರ ಅಧಿಕಾರವ್ಯಾಪ್ತಿಯೂ ಇಡೀ ಕರ್ನಾಟಕ ಸ್ಥಳೀಯ ಪ್ರದೇಶದಲ್ಲಿರುವ ಅದರ ಎಲ್ಲಾ ಪೊಲೀಸ್ ಠಾಣೆಗಳು ಒಳಗೊಂಡಿದೆ ಎಂದು ಉದ್ಧೃತಗೊಳಿಸಿದೆ. ಅದೇ ದಿನದಂದು, ಸರ್ಕಾರವು ಈ ಹಿಂದೆ ಅಂದರೆ ದಿನಾಂಕ 08.05.2002 ರಂದು ಹೊರಡಿಸಿದ ಹೆಚ್‌ಡಿ 292 ಪಿಇಜಿ 2000 ಮತ್ತು ದಿನಾಂಕ 05.01.2002 ರಂದು ಹೊರಡಿಸಿದ ಹೆಚ್‌ಡಿ ಸಂ.334 ಪಿಇಜಡ್ 2002 ಅಧಿಸೂಚನೆಗಳನ್ನು ರದ್ದುಗೊಳಿಸಿದೆ. ಸರ್ಕಾರವು ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 17ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವುದಕ್ಕೆ ಮತ್ತು ಸದರಿ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ನೋಂದಾಯಿಸಿ ಕೊಳ್ಳುವುದಕ್ಕೆ ಮತ್ತು ತನಿಖೆ ಮಾಡುವುದಕ್ಕೆ ಅಧಿಕೃತಗೊಳಿಸಿದೆ. ಈ ನಿರ್ದಿಷ್ಟ

ಅಧಿಸೂಚನೆಯ ಬಗ್ಗೆ ಪ್ರತ್ಯರ್ಜಿದಾರರ ಮಾನ್ಯ ನ್ಯಾಯವಾದಿಗಳು ಸಹ ವಿವಾದವನ್ನು ಎತ್ತಿರುವುದಿಲ್ಲ. ಆದುದರಿಂದ ದಿನಾಂಕ 19.03.2016 ರಿಂದ ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಮೊಕದ್ದಮೆಯನ್ನು ನೋಂದಾಯಿಸಿಕೊಳ್ಳುವುದಕ್ಕೆ ಮತ್ತು ತನಿಖೆ ಮಾಡುವುದಕ್ಕೆ ಅಧಿಕಾರವ್ಯಾಪ್ತಿಯನ್ನು ಹೊಂದಿಲ್ಲ ಎಂಬುದು ಸ್ಪಟಿಕದಷ್ಟು ಸ್ಪಷ್ಟವಾಗಿದೆ.

16. ಅದರ ವಿಷಯ ಏನೇ ಆಗಿರಲಿ, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಲೋಕಾಯುಕ್ತ ಪೊಲೀಸರು ಯಾವುದೇ ಮೊಕದ್ದಮೆಯನ್ನು ನೋಂದಾಯಿಸದಿರುವಾಗ, ಹಾಗೂ ಲೋಕಾಯುಕ್ತ ಅಧಿನಿಯಮದ ಅಡಿಯಲ್ಲಿ ಈ ಮೊಕದ್ದಮೆಯನ್ನು ತನಿಖೆ ನಡೆಸಿರುವುದು ಸಹ ಇಲ್ಲಿ ವಿವಾದವಾಗಿರುವುದಿಲ್ಲ. ಸನ್ಮಾನ್ಯ ಲೋಕಾಯುಕ್ತರು ಯಾವುದೇ ದುರಾಡಳಿತ ಮತ್ತು ಅಕ್ರಮಗಳನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 10ನೇ ಪ್ರಕರಣದ ಅಡಿಯಲ್ಲಿ ಶೋಧನಾ ವಾರೆಂಟನ್ನು ಹೊರಡಿಸುವುದಕ್ಕೆ ಅಧಿಕಾರವನ್ನು ಹೊಂದಿರುವರು. ನಾನು ನನ್ನ ಗಮನವನ್ನು ಪ್ರಧಾನವಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 2(10)ನೇ ಪ್ರಕರಣದಲ್ಲಿ ದುರಾಡಳಿತವನ್ನು ಪರಿಭಾಷಿಸಿರುವ ಕಡೆ ಕೇಂದ್ರಿಕರಿಸಿದ್ದೇನೆ, ಲೋಕಾಯುಕ್ತ ಅಧಿನಿಯಮದ (2)(10)ನೇ ಪ್ರಕರಣವು ಈ ಮುಂದಿನಂತಿದೆ.

> *"2(10) "ದುರಾಡಳಿತ" ಎಂದರೆ ಯಾವುದೇ ಸಂದರ್ಭದಲ್ಲಿ,-*
>
> *(ಎ) ಕ್ರಮ ಅಥವಾ ಅಂಥ ಕ್ರಮಕ್ಕೆ ಸಂಬಂಧಿಸಿದ ಆಡಳಿತ ವಿಧಾನ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಪದ್ಧತಿ ಅಸಮಂಜಸವಾಗಿದ್ದರೆ, ನ್ಯಾಯು ಪೂರ್ಣವಾಗಿಲ್ಲದಿದ್ದರೆ, ದಬ್ಬಾಳಿಕೆಯಿಂದ ಕೂಡಿದ್ದರೆ ಅಥವಾ ಅನುಚಿತ ತಾರತಮ್ಯ ತೋರುವಂತಿದ್ದರೆ; ಅಥವಾ*

*(ಬಿ) ಅಂಥ ಕ್ರಮವನ್ನು ಕೈಗೊಳ್ಳುವಲ್ಲಿ ಉದ್ದೇಶಪೂರ್ವಕ ನಿರ್ಲಕ್ಷ್ಯ ಅಥವಾ ಅನುಚಿತ ವಿಳಂಬವಾಗಿದ್ದರೆ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಆಡಳಿತ ವಿಧಾನ ಅಥವಾ ಪದ್ಧತಿ ಅನುಚಿತ ವಿಳಂಬದಿಂದ ಕೂಡಿದ್ದರೆ,*

*ಹಾಗೆ ಆಡಳಿತ ಪ್ರಕಾರ್ಯಗಳ ಜಾರಿಯಲ್ಲಿ ಕೈಗೊಂಡ ಕ್ರಮ ಅಥವಾ ಕೈಗೊಂಡಿರುವುದಾಗಿ ತಾತ್ಪರ್ಯವಾಗುವ ಕ್ರಮ;"*

ಅರ್ಜಿದಾರರ ಮಾನ್ಯ ನ್ಯಾಯವಾದಿಗಳು, ಶೋಧನಾ ವಾರೆಂಟಿನ ಆದೇಶವನ್ನು ಯಾವುದೇ ದುರಾಡಳಿತವನ್ನು ಉಲ್ಲೇಖಿಸದೇ ಹೊರಡಿಸಿಲಾಗಿದೆಯೆಂದು ನಿವೇದಿಸಿದ್ದಾರೆ.

17. ಮೇಲಿನ ಸದರಿ ಉಪಬಂಧಗಳನ್ನು ಬಹಳ ಜಾಗರೂಕತೆಯಿಂದ ಅವಲೋಕಿಸಿದಾಗ, ದುರಾಡಳಿತವೆಂಬುದನ್ನು ಯಾವುದೇ ನಿರ್ದಿಷ್ಟ ಅಧಿನಿಯಮಕ್ಕೂ ಮಿತಿಗೊಳಿಸಿರುವುದಿಲ್ಲ. ಅಧಿನಿಯಮಗಳು, ಯಾವುದೇ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಅಥವಾ ಅಂಥ ಕ್ರಮಗಳನ್ನು ನಿರ್ವಹಿಸುವ ಅಧಿಕಾರವನ್ನು ಅಸಮಂಜಸ, ಅನ್ಯಾಯ ಅವ್ಯವಹಾರ ಅಥವಾ ಯುಕ್ತವಲ್ಲದ ಅಥವಾ ತಾರತಮ್ಯತೆ ಅಥವಾ ಉದ್ದೇಶಪೂರ್ವಕ ನಿರ್ಲಕ್ಷತೆ ಅಥವಾ ಅಂಥ ಕ್ರಮವನ್ನು ತೆಗೆದುಕೊಳ್ಳಲು ಯುಕ್ತವಲ್ಲದ ವಿಳಂಬತೆಯನ್ನು ಮಾಡಿದಾಗ ಅಥವಾ ಆಡಳಿತ ಪ್ರಕ್ರಿಯೆ ಅಥವಾ ಯುಕ್ತವಲ್ಲದ ವಿಳಂಬತೆ ಒಳಗೊಂಡ ಅಂಥ ಕ್ರಮಗಳನ್ನು ನಿರ್ವಹಿಸುವ ವ್ಯವಹರಣೆಯನ್ನು ಮಾತ್ರವೇ ಉಲ್ಲೇಖಿಸುತ್ತವೆ. ಅಂದರೆ, ಉನ್ನತ ಪ್ರಾಧಿಕಾರಗಳು ಯಾವುದೇ ನಿರ್ಲಕ್ಷತೆಯ ಭಾಗವನ್ನು ಆಡಳಿತಾತ್ಮಕ ಪ್ರಕ್ರಿಯೆಯನ್ನು ನಿಷ್ಕ್ರಿಯಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಲೋಕಾಯುಕ್ತ ಅಧಿನಿಯಮದ 7ನೇ ಪ್ರಕರಣದ ಅಡಿಯಲ್ಲಿ ತನಿಖೆ ನಡೆಸುವುದಕ್ಕೆ ಲೋಕಾಯುಕ್ತ ಪೊಲೀಸರಿಗೂ ಸಹ ಅಧಿಕಾರ ನೀಡಿರುವುದನ್ನು ತಿಳಿಸುತ್ತದೆ. ಲೋಕಾಯುಕ್ತ ಅಧಿನಿಯಮದ 7ನೇ ಪ್ರಕರಣದಲ್ಲಿ ಉಪಲೋಕಾಯುಕ್ತರಿಗೆ ಒಂದು ನಿರ್ದಿಷ್ಟ ಇಲಾಖೆಯ

ದುರಾಡಳಿತದ ಅಡಿಯಲ್ಲಿ ಬರುವ ಯಾವುದೇ ವಿಷಯವನ್ನು ತನಿಖೆ ಮಾಡುವ ಅಧಿಕಾರವನ್ನು ನೀಡಲಾಗಿದೆ.

18. ಈ ಹಿನ್ನೆಲೆಯಲ್ಲಿ, ನಾನು ಈಗಾಗಲೇ ಮಾಡಿದ ಪರಾಮರ್ಶೆಯಂತೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ 10ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಉಪಲೋಕಾಯುಕ್ತರು ಶೋಧನಾ ವಾರೆಂಟನ್ನು ಹೊರಡಿಸಿರುವರು. ಆದುದರಿಂದ, ಯಾವುದೇ ಊಹಾತ್ಮಕ ರೀತಿಯಲ್ಲೂ ಉಪಲೋಕಾಯುಕ್ತರು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವನ್ನು ತನಿಖೆ ಮಾಡುವುದಕ್ಕೆ ಲೋಕಾಯುಕ್ತ ಪೊಲೀಸರಿಗೆ ನಿರ್ದೇಶಿಸಿದ್ದಾರೆಂದು ಹೇಳಲು ಬರುವುದಿಲ್ಲ. ಆದರೆ, ಬಳ್ಳಾರಿ ಜಿಲ್ಲೆಯ ಹಗರಿಯ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ನಲ್ಲಿ ಎಸಗಿರುವ ಯಾವುದೇ ದುರಾಡಳಿತ ಅಥವಾ ಅಕ್ರಮಗಳನ್ನು ಖಚಿತಪಡಿಸಿಕೊಳ್ಳುವುದಕ್ಕೆ ಉಪಲೋಕಾಯುಕ್ತರು ತನಿಖೆಗೆ ನಿರ್ದೇಶಿಸಿರುವರು. ಸನ್ಮಾನ್ಯ ಉಪ–ಲೋಕಾಯುಕ್ತರು ಯಾವ ನಿಖರವಾದ ವಿಶ್ವಸನೀಯ ಮಾಹಿತಿಯಿಂದ ಅಂಥ ಶೋಧನಾ ವಾರೆಂಟ್ ಆದೇಶವನ್ನು ಹೊರಡಿಸಿದ್ದಾರೆಂದು ಪ್ರಶ್ನಿಸುವಂತಿಲ್ಲ ಮತ್ತು ಮಾಹಿತಿಯನ್ನು ಗೋಪ್ಯವಾಗಿ ಇಟ್ಟಿಕೊಳ್ಳುವುದು ಉಪಲೋಕಾಯುಕ್ತರ ವಿವೇಚನೆಯಾಗಿರುತ್ತದೆ. ಹಾಗೆಯೇ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಅಡಿಯಲ್ಲಿ ಉಪಲೋಕಾಯುಕ್ತರು ಅಂಥ ಮಾಹಿತಿಯು ಪರ್ಯಾಪ್ತವಾದುದೆಂದು ಸ್ವತಃ ಅವರೇ ತೃಪ್ತಿಯನ್ನು ವ್ಯಕ್ತಪಡಿಸಿದಾಗ ಮಾತ್ರವೇ ಆ ಸಂಬಂಧದಲ್ಲಿ ಸಮುಚಿತವಾದ ಆದೇಶವನ್ನು ಅವರು ಹೊರಡಿಸಬಹುದಾಗಿದೆ. ಆದುದರಿಂದ, ಮಾನ್ಯ ನ್ಯಾಯವಾದಿಗಳು, ಮಂಡಿಸಿದ, ಲೋಕಾಯುಕ್ತ ಪೊಲೀಸರು ಅರ್ಜಿದಾರರ ಕಚೇರಿಗೆ ವಿಚಾರಣೆ ಅಥವಾ ತನಿಖೆಯ ಉದ್ದೇಶಕ್ಕಾಗಿ ಹೋಗುವ ಮುಂಚೆಯೇ ಮೊದಲು ಮೊಕದ್ದಮೆಯನ್ನು ನೋಂದಾಯಿಸಬೇಕೆಂಬ ವಾದವು ಅಸಮರ್ಥನೀಯವಾಗಿದೆ.

19. ಈಗ ನಾವು ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದ ಎರಡನೇ ಭಾಗಕ್ಕೆ ಬಂದಾಗ, ಲೋಕಾಯುಕ್ತ ಪೊಲೀಸರು ತನಿಖೆಯ ಸ್ಥಳವನ್ನು ತಲುಪಿದ

ತಕ್ಷಣವೇ ಸ್ಥಳವನ್ನು ತನಿಖೆಮಾಡಿದ ವಸ್ತುವಿಷಯವನ್ನು, ವರದಿಯನ್ನು ತದನಂತರದಲ್ಲಿ ಭ್ರಷ್ಟಾಚಾರ ನಿರೋದ ಸಂಸ್ಥೆಗೆ ಸಲ್ಲಿಸಿರುವುದು ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣದಿಂದ ಕೂಡಿದೆ ಎಂಬ ವಾದದ ವಿಷಯವನ್ನು, ಮೇಲಿನ ಸದರಿ ವಾಸ್ತವಿಕ ದೃಷ್ಟಿಕೋನದಿಂದ ಅದನ್ನು ಪರಾಮರ್ಶಿಸಿದಾಗ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ ಅಡಿಯಲ್ಲಿನ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಲೋಕಾಯುಕ್ತ ಪೊಲೀಸರು ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿಲ್ಲದಿರುವಾಗ, ಉಪ–ಲೊಕಾಯುಕ್ತರು ಅಂಥ ತನಿಖೆಯನ್ನು ಮಾಡಲು ಆದೇಶಿಸಿದ್ದಾರೆ ಪೊಲೀಸರು ಹಾಗೆಯೇ ತನಿಖೆ ಮಾಡಿರುವಾಗ, ತನಿಖೆಯಿಂದ ಅರ್ಜಿದಾರರು ಕೆಲವು ಸಂಜ್ಞೇಯ ಅಪರಾಧ ಎಸಗಿರುವರೆಂದು ತಿಳಿದುಬಂದಿರುವಾಗ ಅಥವಾ ಸಂಜ್ಞೇಯ ಅಪರಾಧ ಎಸಗಿರುವರೆಂದು ಆಯೋಗಕ್ಕೆ ಸಂಶಯಬಂದ ಕಾರಣ ಉಪಲೋಕಾಯುಕ್ತರು ತನಿಖೆಗೆ ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಈ ಉದ್ದೇಶಿತ ಪ್ರಕ್ರಿಯೆಯನ್ನು ಲೋಕಾಯುಕ್ತ ಅಧಿನಿಯಮದ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಪರಾಮರ್ಶಿಸಲು ಇಚ್ಛಿಸುತ್ತದೆ. ಲೋಕಾಯುಕ್ತ ಪೊಲೀಸರು ತನಿಖೆ ನಡೆಸಲು ಅಧಿಕಾರವನ್ನು ಹೊಂದಿರುವರು ಮತ್ತು ಪೊಲೀಸ್ ಠಾಣೆಗಳಂತೆ ಘೋಷಿಸಲಾಗಿತ್ತು. ಲೋಕಾಯುಕ್ತ ಅಧಿನಿಯಮದ 10(2)ನೇ ಪ್ರಕರಣವು ದಂಡ ಪ್ರಕ್ರಿಯಾ ಸಂಹಿತೆ 1973ರ ಉಪಬಂಧಗಳ ಅನುಸಾರವಾಗಿ ಲೋಕಾಯುಕ್ತ ಪೊಲೀಸರಿಗೆ ಯಾವುದೇ ತನಿಖೆ ಅಥವಾ ವಿಚಾರಣೆ ನಡೆಸುವುದಕ್ಕೆ ಸ್ಪಷ್ಟವಾದ ಅಧಿಕಾರವನ್ನು ನೀಡಿದೆ. 10(2)ನೇ ಉಪಬಂಧವು ಈ ಕೆಳಗಿನಂತಿದೆ:–

*"10. ಶೋಧನಾ ವಾರಂಟ್, ಮೊದಲಾದುವುಗಳ ಹೊರಡಿಸುವಿಕೆ.–*

*(1) xxxxxx*

*(2) ದಂಡ ಪ್ರಕ್ರಿಯಾ ಸಂಹಿತೆ, 1973ರ ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಪಟ್ಟ ಉಪಬಂಧಗಳು (1)ನೇ*

*ಉಪಪ್ರಕರಣದ ಶೋಧನೆಗಳು ಮತ್ತು ಅಭಿಗ್ರಹಣಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯಿಸತಕ್ಕದ್ದು."*

ಆದುದರಿಂದ, ಲೋಕಾಯುಕ್ತ ಪೊಲೀಸರು ಶೋಧನೆ, ಜಪ್ತಿ ಮಾಡುವ ಉದ್ದೇಶಕ್ಕಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 7ನೇ ಪ್ರಕರಣದ ಅಡಿಯಲ್ಲಿ ವಿಷಯವನ್ನು ತನಿಖೆ ಮಾಡುವುದಕ್ಕೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವವರು ವಾರೆಂಟಿನ ಅಡಿಯಲ್ಲಿ ಶೋಧನೆ ಮತ್ತು ಯಾವುದೇ ಸಾಮಗ್ರಿಗಳನ್ನು ಜಪ್ತಿಮಾಡಲು ಅಧಿಕಾರವನ್ನು ಹೊಂದಿರುವವರು.

20. ಅಲ್ಲದಿದ್ದಾಗ್ಯೂ ಸಹಾ, ದಂಡ ಪ್ರಕ್ರಿಯಾ ಸಂಹಿತೆಯ 41ನೇ ಪ್ರಕರಣ ಕೆಲವೊಂದು ವಿಶಿಷ್ಟ ಸನ್ನಿವೇಶಗಳ ಅಡಿಯಲ್ಲಿ ವ್ಯಕ್ತಿಗಳನ್ನು ದಸ್ತಗಿರಿಮಾಡುವ, ಶೋಧನೆ ಮತ್ತು ಕೆಲವು ವಸ್ತುಗಳನ್ನು ಜಪ್ತಿ ಮಾಡಲು ಕೆಲವು ವಿಸ್ತರಿತ ವ್ಯವಹರಣೆಗಳನ್ನು 41ನೇ ಪ್ರಕರಣದ ಉಪಬಂಧದಲ್ಲಿ ಉಲ್ಲೇಖಿಸಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 41ನೇ ಪ್ರಕರಣವು ವ್ಯಕ್ತಿಗಳ ದಸ್ತಗಿರಿಯು ವ್ಯವಹರಣೆಗೆ ಸಂಬಂಧಿಸಿದೆ. ಈ ನ್ಯಾಯಾಲಯವು 41ನೇ (1)(ಎ) ಮತ್ತು (ಡಿ) ಪ್ರಕರಣದ ಸುಸಂಗತ ಉಪಬಂಧಗಳನ್ನು ಅಗತ್ಯವಾಗಿ ಪರಿಗಣಿಸಬೇಕಾಗುತ್ತದೆ. ಈ ನ್ಯಾಯಾಲಯವು ಅಗತ್ಯವೆಂದು ಪರಿಗಣಿಸಿದ ಉಪಬಂಧಗಳು ಈ ಕೆಳಗಿನಂತಿದೆ:

*"ಪ್ರಕರಣ 41(1)(ಎ).– ಯಾರು ಯಾವುದೇ ಸಂಜ್ಞೇಯ ಅಪರಾಧವನ್ನು ಯಾರೇ ಒಬ್ಬ ಪೊಲೀಸ್ ಅಧಿಕಾರಿಯ ಹಾಜರಿಯಲ್ಲಿ ಕೃತ್ಯ ಎಸಗಿದ್ದರೆ;*

*(ಬಿ) ಮತ್ತು (ಸಿ)xxxxxx*

*(ಡಿ) ಕಳವು ಮಾಲೆಂದು ಸಕಾರಣವಾಗಿ ಸಂಶಯ ಪಡಬಹುದಾದ ಯಾವುದೇ ವಸ್ತುವು ಯಾರ ಸ್ವಾಧೀನದಲ್ಲಿ ಕಂಡು ಬರುವುದೋ*

*ಮತ್ತು ಯಾರು ಅಂತಹ ವಸ್ತುವಿನ ಸಂಬಂಧದಲ್ಲಿ ಅಪರಾಧವನ್ನು ಮಾಡಿರುವುದಾಗಿ, ಸಕಾರಣವಾಗಿ ಸಂಶಯಪಡಬಹುದೋ";*

21. ಮೇಲಿನ ಸದರಿ ಪ್ರಕರಣವು ಯಾವುದೇ ಸಂಜ್ಞೇಯ ಅಪರಾಧವನ್ನು ತಡೆಯುವುದಕ್ಕಾಗಿ ಅಥವಾ ಪತ್ತೆಹಚ್ಚುವುದಕ್ಕಾಗಿ ಔಪಚಾರಿಕತೆ ಮತ್ತು ವಿಳಂಬತೆಯ ಹೊರತಾಗಿ ತ್ವರಿತವಾಗಿ ಕೆಲಸವನ್ನು ನಿರ್ವಹಿಸಲು ಪೊಲೀಸರಿಗೆ ವ್ಯಾಪಕವಾದ ಅಧಿಕಾರಗಳನ್ನು ಪ್ರದತ್ತಗೊಳಿಸಿದೆ. ಅದರಿಂದ ನ್ಯಾಯಾಲಯವು ಇಂತಹ ಅಧಿಕಾರಗಳು ದೂರುಗಳನ್ನು ದುರುಪಯೋಗ ಪಡಿಸಿಕೊಂಡಿಲ್ಲದಿರುವ ಅಥವಾ ವೈಯಕ್ತಿಕ ಭಾವನೆಗಳ ಸಮಾಧಾನಕ್ಕಾಗಿ ಬಳಸಿಕೊಂಡಿಲ್ಲದಿರುವ ಅಥವಾ ಅಂತಹ ಯಾವ ಉದ್ದೇಶವನ್ನು ಹೊಂದಿಲ್ಲದಿರುವುದನ್ನು ನಿರ್ದಿಷ್ಟವಾಗಿ ತುಂಬಾ ಜಾಗರೂಕತೆಯಿಂದ ಪದತ್ತ ಅಧಿಕಾರಗಳನ್ನು ಪರಿಶೀಲಿಸತಕ್ಕದ್ದು. ನಿರ್ದಿಷ್ಟವಾಗಿ ಈ ಮೊಕದ್ದಮೆಯಲ್ಲಿ ತನಿಖೆಯ ಸಂದರ್ಭದಲ್ಲಿ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿರುವುದು ಮತ್ತು ಸ್ವತ್ತುಗಳನ್ನು ಜಪ್ತಿಮಾಡಿರುವುದು ಕಂಡುಬಂದಿದೆ. ನನ್ನ ಅಭಿಪ್ರಾಯದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 41ನೇ ಪ್ರಕರಣದ ಅಡಿಯಲ್ಲಿ ಪೊಲೀಸರಿಗೆ ಪದತ್ತಗೊಳಿಸಿದ ಅಧಿಕಾರವನ್ನು ಅವರು ದುರುಪಯೋಗ ಪಡಿಸಿಕೊಂಡಿರುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಅಲ್ಲದೆ, ಅಧಿಕಾರವ್ಯಾಪ್ತಿಯ ಹೊರತು ವ್ಯಕ್ತಿಯನ್ನು ಬಂಧಿಸುವುದು, ಅಂಥ ಬಂಧನದ ವ್ಯಕ್ತಿಯ ಸ್ವಾತಂತ್ರವನ್ನು ಮಾತ್ರ ಗಂಭೀರವಾಗಿ ಆಕ್ರಮಣ ಮಾಡಿದಂತೆ ಕಂಡುಬರುತ್ತದೆ. ಪೊಲೀಸರು ಕರ್ತವ್ಯವನ್ನು ವಾರೆಂಟಿನ ಹೊರತು ಬಂಧನವನ್ನು ಮಾಡಿರುವಾಗ, ಅವರು ಅಪರಾಧದ ಸಾಧ್ಯತೆಗಳನ್ನು ಪರಿಗಣಿಸಿ ಅವರು ತುಂಬಾ ತ್ವರಿತವಾಗಿ ತೆಗೆದುಕೊಂಡ ತೀರ್ಮಾನ ಸಂದೇಹಕ್ಕೆ ಆಸ್ಪದ ನೀಡಿಲ್ಲ. ಹಾಗೆಯೇ, ಪೊಲೀಸರು ಪ್ರಾಮಾಣಿಕರೂ ಪಾಪಪ್ರಜ್ಞೆಯಿಂದ ಕಳವಳ ಪಟ್ಟುಕೊಳ್ಳುವಂತಹ ತಪ್ಪನ್ನು ಮಾಡದೆ ತಡೆಯುವುದು ಸಹ ಪೊಲೀಸರ ಕರ್ತವ್ಯಗಳಲ್ಲಿ ಒಂದಾಗಿದೆ. ಪೊಲೀಸರಿಗೆ ವ್ಯಕ್ತಿಯ ಬಂಧನ ಅಥವಾ ಶೋಧನೆ ಮತ್ತು ಸ್ವತ್ತಿನ ಜಪ್ತಿಯೂ ವಿವೇಚನಾಧಿಕಾರವನ್ನು ನೀಡಲಾಗಿದೆ. ಆದಾಗ್ಯೂ, ಪೊಲೀಸರು ಅಂಥ ಅಧಿಕಾರಗಳನ್ನು ತುರ್ತು ಅಗತ್ಯತೆ ಮತ್ತು ಸಂದರ್ಭಗಳಲ್ಲಿ ಮಾತ್ರವೇ ಚಲಾಯಿಸಬೇಕಾಗುತ್ತದೆ. ಈ ಮೊಕದ್ದಮೆಯಲ್ಲಿ ತಪ್ಪು ಕಲ್ಪನೆಯಿಂದಾಗಿ

ಪೊಲೀಸ್ ಅಧಿಕಾರಿ ಅರ್ಜಿದಾರರನ್ನು ಬಂಧಿಸಿದ್ದರೆ ಮತ್ತು ಕೆಲವು ವಸ್ತುಗಳನ್ನು ಜಪ್ತಿಮಾಡಿದ್ದರೂ ಅದು ವ್ಯವಹರಣೆಗಳನ್ನು ನಿರರ್ಥಕಗೊಳಿಸಲು ಸಾಧ್ಯವಾಗುವುದಿಲ್ಲ ಈ ಮೊಕದ್ದಮೆಯೂ ಮೇಲಿನ ಸದರಿ ಉಪಬಂಧಗಳ ವ್ಯಾಪ್ತಿಗೆ ಬರುತ್ತದೆ.

22. ದಂಡ ಪ್ರಕ್ರಿಯಾ ಸಂಹಿತೆಯ 41ನೇ ಅಧಿನಿಯಮದ ಅಡಿಯಲ್ಲಿ ವ್ಯಕ್ತಿಯನ್ನು ಬಂಧಿಸಿದಲ್ಲಿ ಪೊಲೀಸ್ ಅಧಿಕಾರಿ ಮಾಡಬೇಕಾದ ಮುಂದಿನ ಕ್ರಮವನ್ನು ಪ್ರಕ್ರಿಯಾ ಸಂಹಿತೆಯ 51ನೇ ಪ್ರಕರಣವು ಉಲ್ಲೇಖಿಸುತ್ತದೆ. ಅದು ಈ ಮುಂದಿನಂತಿದೆ:

> *"51. ದಸ್ತಗಿರಿಯಾದ ವ್ಯಕ್ತಿಯ ಶೋಧನೆ . – (1) ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿರದ ವಾರಂಟಿನ ಮೇರೆಗೆ ಅಥವಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅವಕಾಶವಿರುವ ವಾರಂಟಿನ ಮೇರೆಗೆ, ಆದರೆ ದಸ್ತಗಿರಿಯಾದ ವ್ಯಕ್ತಿಯು ಜಾಮೀನು ಒದಗಿಸಲಾಗಿದೆ, ಪೊಲೀಸು ಅಧಿಕಾರಿಯಿಂದ ಒಬ್ಬ ವ್ಯಕ್ತಿಯು ದಸ್ತಗಿರಿಯಾದಾಗ ಮತ್ತು,*
>
> *ವಾರೆಂಟಿಲ್ಲದೆ ವ್ಯಕ್ತಿಗೆ ದಸ್ತಗಿರಿಯಾದಾಗ ಅಥವಾ ವಾರಂಟಿನ ಮೇರೆಗೆ ಒಬ್ಬ ಖಾಸಗೀ ವ್ಯಕ್ತಿಯಿಂದ ದಸ್ತಗಿರಿಯಾದಾಗ ಮತ್ತು ವಿಧಿಸಮ್ಮತವಾಗಿ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆಗದಿದ್ದಾಗ ಅಥವಾ ಜಾಮೀನು ಒದಗಿಸಲು ಸಾಧ್ಯವಾಗದಿದ್ದಾಗ,*
>
> *ದಸ್ತಗಿರಿ ಮಾಡುವ ಅಧಿಕಾರಿಯು ಅಥವಾ ಖಾಸಗೀ ವ್ಯಕ್ತಿಯು ದಸ್ತಗಿರಿ ಮಾಡಿದಾಗ, ದಸ್ತಗಿರಿಯಾದ ವ್ಯಕ್ತಿಯನ್ನು ಯಾವ ಪೋಲೀಸು ಅಧಿಕಾರಿಗೆ ಒಪ್ಪಿಸಲಾಗಿದೆಯೋ, ಆ ಅಧಿಕಾರಿಯು ಅಂಥ ವ್ಯಕ್ತಿಯನ್ನು ಶೋಧಿಸಬಹುದು, ಮತ್ತು ಅವನಲ್ಲಿ ದೊರೆತ ಅವಶ್ಯಕ ಉಡುಪನ್ನುಳಿದು ಎಲ್ಲ ವಸ್ತುಗಳನ್ನು*

*ಸುರಕ್ಷಿತ ಅಭಿರಕ್ಷೆಯಲ್ಲಿಡಬಹುದು ಮತ್ತು ದಸ್ತಗಿರಿಯಾದ ವ್ಯಕ್ತಿಯಿಂದ ಯಾವುದೇ ವಸ್ತುವನ್ನು ಅಭಿಗ್ರಹಿಸಲಾಗಿದ್ದರೆ, ಪೋಲೀಸು ಅಧಿಕಾರಿಯು ಸ್ವಾಧೀನಪಡಿಸಿಕೊಂಡ ವಸ್ತುಗಳನ್ನು ತೋರಿಸುವ ರಸೀತಿಯನ್ನು ಅಂಥ ವ್ಯಕ್ತಿಗೆ ಕೊಡತಕ್ಕುದು.*

*(2) ಒಬ್ಬ ಸ್ತ್ರೀಯನ್ನು ಶೋಧನೆ ಮಾಡಿಸುವುದು ಅವಶ್ಯಕವಾದಾಗ, ಸಭ್ಯತೆಗೆ ಪೂರ್ಣ ಗಮನಕೊಟ್ಟು ಮತ್ತೊಬ್ಬ ಸ್ತ್ರೀಯು ಶೋಧನೆ ಮಾಡತಕ್ಕದ್ದು."*

*(ಒತ್ತು ನೀಡಲಾಗಿದೆ)*

51(1)ನೇ ಪ್ರಕರಣದ ಪ್ರಾರಂಭಿಕ ಭಾಗದಲ್ಲಿ, ಪೊಲೀಸ್ ಅಧಿಕಾರಿಗೆ ವಾರೆಂಟ್‌ನೊಂದಿಗೆ ವ್ಯಕ್ತಿಯನ್ನು ಬಂಧಿಸುವುದಕ್ಕೆ ನೀಡಲಾದ ಅಧಿಕಾರವನ್ನು ನೋಡಬಹುದಾಗಿದೆ. ಆದರೆ ಸದರಿ ಪ್ರಕರಣದ ಎರಡನೇ ಭಾಗದಲ್ಲಿ ಪೊಲೀಸ್ ಅಧಿಕಾರಿ ವಾರೆಂಟಿಲ್ಲದೆ ವ್ಯಕ್ತಿಯನ್ನು ದಸ್ತಗಿರಿಮಾಡಿದ್ದಲ್ಲಿ ಮತ್ತು ವ್ಯಕ್ತಿಯ ದಸ್ತಗಿರಿಯನ್ನು ಕಾನೂನು ಸಮ್ಮತವಾಗಿ ಅಂಗೀಕರಿಸಲು ಸಾಧ್ಯವಾಗದಿದ್ದಲ್ಲಿ, ಜಾಮೀನು ಕೊಡುವುದಕ್ಕೆ ಅಥವಾ ಜಾಮೀನು ಒದಗಿಸಲು ಸಾಧ್ಯವಾಗದಿದ್ದಲ್ಲಿ ಅಂಥ ಅಧಿಕಾರಿ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಮತ್ತು ಸ್ಥಳವನ್ನು ಶೋಧನೆ ಮಾಡಿರುವಾಗ, ಎಲ್ಲಾ ವಸ್ತುಗಳನ್ನು ಅನ್ಯಥಾ ದಸ್ತಗಿರಿಯಾದ ವ್ಯಕ್ತಿ ಧರಿಸಿರುವ ಬಟ್ಟೆಗಳನ್ನು ಹೊರತುಪಡಿಸಿ ಎಲ್ಲಾ ವಸ್ತುಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿದ್ದಲ್ಲಿ ಮತ್ತು ಬಂಧಿತ ವ್ಯಕ್ತಿಯಿಂದ ಅಂಥ ವಸ್ತುಗಳನ್ನು ಜಪ್ತಿಮಾಡಿದ್ದಲ್ಲಿ, ಪೊಲೀಸ್ ಅಧಿಕಾರಿಯೂ ತನ್ನ ಸ್ವಾಧೀನಕ್ಕೆ ತೆಗೆದುಕೊಂಡ ವಸ್ತುಗಳೆಲ್ಲವನ್ನು ನಮೂದಿಸಿರುವ ರಸೀದಿಯನ್ನು ಬಂಧಿತವ್ಯಕ್ತಿಗೆ ಕೊಡತಕ್ಕದ್ದು. ಪೊಲೀಸ್ ಅಧಿಕಾರಿ ವಾರಂಟಿಲ್ಲದೆ ವ್ಯಕ್ತಿಯನ್ನು ಬಂಧಿಸಿದ್ದಲ್ಲಿ ಮತ್ತು ಯಾವುದೇ ಶೋಧನೆ ಮಾಡಿದ್ದಲ್ಲಿ ಅಂಥ ಪೊಲೀಸ್ ಅಧಿಕಾರಿ ಸಹ ಅಂಥ ಜಪ್ತಿಮಾಡಿದ ವಸ್ತುಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕದ್ದು.

23. ಮೇಲಿನದ್ದಕ್ಕೆ ಹೆಚ್ಚುವರಿಯಾಗಿ ಈ ಮುಂದಿನದನ್ನು ಮತ್ತಷ್ಟನ್ನು ಸೇರಿಸುವುದಾದರೆ, ದಂಡ ಪ್ರಕ್ರಿಯಾ ಸಂಹಿತೆಯ 56ನೇ ಪ್ರಕರಣವು ವಾರೆಂಟಿಲ್ಲದೆ ಯಾರೇ ವ್ಯಕ್ತಿಯನ್ನು ಪೊಲೀಸ್ ಅಧಿಕಾರಿ ಬಂಧಿಸಿದ ಸಂಬಂಧದಲ್ಲಿ ಪೊಲೀಸ್ ಅಧಿಕಾರಿ ಮಾಡಬೇಕಾದದ್ದನ್ನು 56ನೇ ಪ್ರಕರಣವು ಮಾರ್ಗದರ್ಶಿಸುತ್ತದೆ. ಅದು ಈ ಮುಂದಿನಂತಿದೆ:

> *56. ದಸ್ತಗಿರಿಯಾದ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟ್ ಅಥವಾ ಪೋಲೀಸು ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದು .– ವಾರಂಟಿಲ್ಲದೆ ದಸ್ತಗಿರಿ ಮಾಡುವ ಒಬ್ಬ ಪೋಲೀಸು ಅಧಿಕಾರಿಯು, ಅನಾವಶ್ಯಕ ವಿಳಂಬವಿಲ್ಲದೆ ಮತ್ತು ಜಾಮೀನಿಗೆ ಸಂಬಂಧಿಸಿದಂತೆ ಇದರಲ್ಲಿರುವ ಉಪಬಂಧಗಳಿಗೊಳಪಟ್ಟು, ಮೊಕದ್ದಮೆಯ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಅಥವಾ ಪೋಲೀಸು ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯ ಮುಂದೆ ದಸ್ತಗಿರಿಯಾದ ವ್ಯಕ್ತಿಯನ್ನು ಕರೆದೊಯ್ಯತಕ್ಕದು ಅಥವಾ ಕಳಿಸತಕ್ಕದು.*
>
> (ಒತ್ತು ನೀಡಲಾಗಿದೆ)

24. 41ನೇ, 51ನೇ ಮತ್ತು 56ನೇ ಪ್ರಕರಣವನ್ನು ಜೊತೆಜೊತೆಯಾಗಿ ಓದಿಕೊಂಡಾಗ ಪೊಲೀಸ್ ಅಧಿಕಾರಿ ವಾರೆಂಟಿಲ್ಲದೆ ಯಾರೇ ವ್ಯಕ್ತಿಯನ್ನು ಬಂಧಿಸಿದ್ದರೆ ಮತ್ತು ಅನಗತ್ಯ ವಿಳಂಬದ ಹೊರತಾಗಿ ಕೆಲವು ವಸ್ತುಗಳನ್ನು ಜಪ್ತಿ ಮಾಡಿದ್ದರೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಕ್ಕೊಳಪಟ್ಟ ಸದರಿ ಬಂಧಿತ ವ್ಯಕ್ತಿಯನ್ನು ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟರ ಮುಂದೆ ಅಥವಾ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಕರೆದುಕೊಂಡು ಹೋಗುವುದನ್ನ ಅಥವಾ ಕಳುಹಿಸುವುದನ್ನು ಅದು ಸ್ಪಷ್ಟವಾಗಿ ಹೇಳುತ್ತದೆ. ಆದುದರಿಂದ, ಈ ಮೇಲೆ ಹೇಳಲಾದ ಪ್ರಕರಣಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು

ಚಲಾಯಿಸಲು, ಮೊಕದ್ದಮೆಯನ್ನು ಅಧಿಕಾರವ್ಯಾಪ್ತಿ ಇಲ್ಲದ ಅಥವಾ ಯಾವುದೇ ಹೆಚ್ಚಿನ ತನಿಖೆಯನ್ನು ನಡೆಸಲು ಅಧಿಕಾರ ವ್ಯಾಪ್ತಿ ಇಲ್ಲದ ಪೊಲೀಸ್ ಠಾಣೆಯಲ್ಲಿ ನೋಂದಾಯಿಸಬಾರದು ಎಂದು ಸೂಚಿಸುತ್ತದೆ. ಆದರೆ 41ನೇ ಪ್ರಕರಣ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸುವ ಮೂಲಕ ವಿಷಯವನ್ನು ತನಿಖೆ ಮಾಡುವುದಕ್ಕೆ ಅಧಿಕಾರವ್ಯಾಪ್ತಿ ಹೊಂದಿರುವ ಸಕ್ಷಮ ಪೊಲೀಸ್ ಅಧಿಕಾರಿ ಅಥವಾ ಪೊಲೀಸ್ ಠಾಣೆಯು ಬಂಧಿತ ವ್ಯಕ್ತಿಯನ್ನು ಮತ್ತು ಜಪ್ತಿ ಮಾಡಿದ ಕೆಲವು ವಸ್ತುಗಳನ್ನು ನಿಶ್ಚಿತಪಡಿಸಿಕೊಳ್ಳುವುದು ಅವನ ಕರ್ತವ್ಯವಾಗಿರುತ್ತದೆ ಮತ್ತು ಯಾವುದೇ ಅನಗತ್ಯ ವಿಳಂಬದ ಹೊರತಾಗಿ ಬಂಧಿತನಾದ ಅಂಥ ವ್ಯಕ್ತಿಯನ್ನು ಜಪ್ತಿ ಮಾಡಿದಂಥ ವಸ್ತುಗಳನ್ನು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವಂಥ ಅಧಿಕಾರಿಯ ಮುಂದೆ ಇಡತಕ್ಕದ್ದು ಎಂದು ವಿವರವಾಗಿ ನಿರ್ದೇಶಿಸುತ್ತದೆ.

25. ಕಾನೂನಿನ ಮೇಲಿನ ಸದರಿ ಉಪಬಂಧವನ್ನು ಉಲ್ಲೇಖಿಸುವುದರೊಂದಿಗೆ ಈ ಮೊಕದ್ದಮೆಯ ವಾಸ್ತವಿಕ ಅಂಶಗಳ ಕಡೆಗೆ ನಾನು ನನ್ನ ಗಮನವನ್ನು ಕೇಂದ್ರಿಕರಿಸಲು ಇಚ್ಛಿಸುತ್ತೇನೆ. ಲೋಕಾಯುಕ್ತರು ಹೊರಡಿಸಿದ ವಾರೆಂಟಿನ ಬಲದ ಕಾರಣದಿಂದಾಗಿ, ಲೋಕಾಯುಕ್ತ ಪೊಲೀಸರು, ಸದರಿ ಕಚೇರಿಯಲ್ಲಿ ಯಾವುದೇ ದುರಾಡಳಿತ ನಡೆಯುತ್ತಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಲೋಕಾಯುಕ್ತ ಪೊಲೀಸರು ಅರ್ಜಿದಾರರ ಕಚೇರಿಯ ಮೇಲೆ ದಾಳಿ ನಡೆಸಿರುತ್ತಾರೆ. ಆದರೆ, ಅಂಥ ವಿಚಾರಣೆ ಅಥವಾ ತನಿಖೆಯ ಸಮಯದಲ್ಲಿ ಲೋಕಾಯುಕ್ತ ಪೊಲೀಸರಿಗೆ ಕಚೇರಿಯಲ್ಲಿ ದೊರೆತ ಮೊತ್ತ 1,590/– ರೂಪಾಯಿಗಳನ್ನು ಸಾರ್ವಜನಿಕ ಸೇವಕರಾದ ಅರ್ಜಿದಾರರು ತನ್ನ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂಬ ಸಂಶಯ ಅವರಲ್ಲಿ ವ್ಯಕ್ತಪಡಿಸಿದೆ. ಆದುದರಿಂದ, ಅರ್ಜಿದಾರರ ಸದರಿ ಕಾರ್ಯವು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಬರುತ್ತದೆ ಎಂದು ಅವರು ಸಂಶಯವನ್ನು ವ್ಯಕ್ತಪಡಿಸಿರುವರು. ಆದುದರಿಂದ, ಲೋಕಾಯುಕ್ತ ಪೊಲೀಸರು ದಿನಾಂಕ: 17.09.2016 ರಂದು ಬಳ್ಳಾರಿ ಜಿಲ್ಲೆಯ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಮುಂದೆ ಅಪಾದಿತ ವ್ಯಕ್ತಿಗಳು ಸಂಜ್ಞೇಯ ಅಪರಾಧ ಎಸಗಿರುವರೆಂದು ಅರ್ಜಿದಾರರ ಕಚೇರಿಗೆ ಲೋಕಾಯುಕ್ತ ಪೊಲೀಸರು ಹೋದ

ಬಗ್ಗೆ ಮತ್ತು ಹೇಗೆ ಎಂಬ ಬಗ್ಗೆ ಪ್ರಥಮ ಮಾಹಿತಿ ವರದಿಯಲ್ಲಿ ಮೇಲಿನ ಸದರಿ ಅಂಶಗಳನ್ನು ವಿವರವಾಗಿ ದಾಖಲಿಸಿರುವುದು ಸರಿಯಾದುದಾಗಿದೆ. ಅಲ್ಲದೆ, ಇಲ್ಲಿ ಪ್ರಥಮ ಮಾಹಿತಿ ವರದಿಯನ್ನು ವಿಳಂಬವಾಗಿ ದಾಖಲಿಸಿರುವುದು ಸಹ ಕಂಡುಬರುತ್ತದೆ. ಅಂದರೆ ಲೋಕಾಯುಕ್ತ ಪೊಲೀಸರು ದಿನಾಂಕ 23.08.2016 ರಂದು ತನಿಖೆ ಅಥವಾ ವಿಚಾರಣೆಯನ್ನು ಮಾಡಿರುತ್ತಾರೆ ಆದರೆ ಅವರು ಪ್ರಥಮ ಮಾಹಿತಿ ವರದಿಯನ್ನು ದಿನಾಂಕ 17.09.2016 ರಂದು ದಾಖಲಿಸಿರುವರು. ಅದೇ ಸಮಯದಲ್ಲಿ ಅರ್ಜಿದಾರರು ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡಿರುವುದು ಸಹ ದಾಖಲೆಗಳಿಂದ ಕಂಡು ಬಂದಿದೆ. ನನ್ನ ಅಭಿಪ್ರಾಯದಲ್ಲಿ ಇಡೀ ಮೊಕದ್ದಮೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸಾಕಷ್ಟು ಕಾಲ ವಿಳಂಬವಾಗಿಲ್ಲದಿರುವುದು ಕಂಡು ಬರುತ್ತದೆ. ಒಮ್ಮೆ ಸಂಜ್ಞೇಯ ಅಪರಾಧವನ್ನು ಎಸಗಿರುವರೆಂದು ಮಾಡಿದ ಸಂಶಯಾಸ್ಪದ ಆಪಾದನೆಗಳ ಸಂಬಂಧದಲ್ಲಿ ಭ್ರಷ್ಟಾಚಾರ ನಿರೋಧ ಸಂಸ್ಥೆ ಪೊಲೀಸರು ಮೊಕದ್ದಮೆಯನ್ನು ನೋಂದಾಯಿಸಿಕೊಳ್ಳುವ ಹೊರತಾಗಿ ಬೇರೆಯ ಆಯ್ಕೆಯನ್ನು ಅವರು ಹೊಂದಿರುವುದಿಲ್ಲ ಹಾಗೂ ಆಪಾದಿತ ವ್ಯಕ್ತಿಗಳ ವಿರುದ್ಧ ಅವರು ಆರೋಪಪಟ್ಟಿಯನ್ನು ದಾಖಲು ಮಾಡಬೇಕೆಂದು ಇದರ ಅರ್ಥವಲ್ಲ. ಆದರೆ, ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ ಅಡಿಯಲ್ಲಿ ಯಾವುದೇ ಉಪಬಂಧಗಳ ಯುಕ್ತವಾಗಿ ಅನ್ವಯವಾಗುವಂಥ ಆಪಾದನೆಗಳನ್ನು ಖಚಿತಪಡಿಸಿಕೊಳ್ಳುವುದಕ್ಕೆ ತನಿಖೆ ನಡೆಸುವ ಕ್ರಮದಲ್ಲಿ ಅವರು ಮೊಕದ್ದಮೆಯನ್ನು ನೋಂದಾಯಿಸಿದ ತರುವಾಯ ಅವಶ್ಯವಿದ್ದರೆ ಆ ವಿಷಯದೊಳಗೆ ತನಿಖೆಯನ್ನು ಅವರು ನಡೆಸಬೇಕಾಗುತ್ತದೆ. ಅವರು ಯಾವುದೇ ಚಾರ್ಜ್‌ಶೀಟನ್ನು ದಾಖಲಿಸಬಾರದು ಹಾಗೂ ಅವರು ನ್ಯಾಯಾಲಯದ ಮುಂದೆ ಯುಕ್ತವಾದ ವರದಿಯನ್ನು ದಾಖಲಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಆದುದರಿಂದ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು ಮೊಕದ್ದಮೆಯನ್ನು ನೋಂದಾಯಿಸಿರುವುದು ಕಾನೂನು ದೃಷ್ಟಿಯಲ್ಲಿ ದೋಷಪೂರ್ಣವೆಂದು ಹೇಳಲು ಸಾಧ್ಯವಿಲ್ಲ.

26. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಆಪಾದಿತ ವ್ಯಕ್ತಿಗಳು ಯಾವುದೇ ಹಣಕ್ಕೆ ಮಾಡಿದ ಬೇಡಿಕೆ ಮತ್ತು ಸ್ವೀಕರಿಸಿದ ಸಂಬಂಧದಲ್ಲಿ

13(1)(i)(ii)(iii) ಪ್ರಕರಣ ಅನ್ವಯವಾಗುವಂತಹ ಯಾವುದೇ ದಾಖಲೆಗಳು ಇರುವುದಿಲ್ಲವೆಂದು ಮತ್ತು ಅಧಿನಿಯಮದ 13(1)(ಇ) ಪ್ರಕರಣ ಅನ್ವಯವಾಗುವಂತಹ ಪ್ರಾಥಮಿಕ ವರದಿ ಅಥವಾ ಮೂಲ ವರದಿಯೂ ಇರುವುದಿಲ್ಲವೆಂದು ಸಹ ನಿವೇದಿಸಿರುವರು. ಆದುದರಿಂದ ಭ್ರಷ್ಟಾಚಾರ ನಿರೋಧ ಸಂಸ್ಥೆ ಪೋಲೀಸರು ನೋಂದಾಯಿಸಿದ ಮೊಕದ್ದಮೆಯ ಕಾನೂನು ದೃಷ್ಟಿಯಲ್ಲಿ ದೋಷಪೂರ್ಣವಾದುದು ಎಂದು ನಿವೇದಿಸಿರುವರು.

27. ಲೋಕಾಯುಕ್ತ ಪೋಲೀಸರು ಸಲ್ಲಿಸಿದ ವರದಿಯಲ್ಲಿ ಮಾಡಿರುವ ಆಪಾದನೆಗಳಲ್ಲಿ ಅರ್ಜಿದಾರರು, ತಮ್ಮಲ್ಲಿ ಇಟ್ಟಿಕೊಂಡಿದ್ದ ಮೊಬಲಗಿನ ಬಗ್ಗೆ ಯಾವುದೇ ಲೆಕ್ಕ ಪತ್ರಗಳನ್ನು ನೀಡಿರುವುದಿಲ್ಲವೆಂದು ಅರ್ಜಿದಾರರ ಮೇಲೆ ಆಪಾದನೆಗಳನ್ನು ಮಾಡಿರುವುದು ಕಂಡುಬರುತ್ತದೆ. ಆದುದರಿಂದ, ಲೋಕಾಯುಕ್ತ ಪೋಲೀಸರು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನು ಅರ್ಜಿದಾರರು ಎಸಗಿರುವರೆಂದು ಮಾತ್ರವೇ ಸಂಶಯವನ್ನು ವ್ಯಕ್ತಪಡಿಸಿರುವರು. ಅಧಿನಿಯಮದ 13(1)(ಡಿ)ನೇ ಪ್ರಕರಣದ ಉಪಬಂಧಗಳು ವ್ಯಕ್ತಿಯು ಭ್ರಷ್ಟನಾಗಿದ್ದರೆ ಮತ್ತು ಅಕ್ರಮ ಸಂಪಾದನೆ ಮಾಡಿದ್ದರೆ ಎಂದರೆ, ಸ್ವತಃ ತನಗಾಗಿ ಅಥವಾ ಯಾವುದೇ ಇತರ ವ್ಯಕ್ತಿಗಾಗಿ ಯಾವುದೇ ಅಮೂಲ್ಯ ವಸ್ತುಗಳನ್ನು ಅಥವಾ ಆರ್ಥಿಕ ಪ್ರಯೋಜನಗಳನ್ನು ಪಡೆದುಕೊಂಡಿದ್ದರೆ; ವ್ಯಕ್ತಿಯು ಸ್ವತಃ ತನಗಾಗಿ ಅಥವಾ ಯಾರೇ ಇತರ ವ್ಯಕ್ತಿಗಾಗಿ ಯಾವುದೇ ಅಮೂಲ್ಯ ವಸ್ತುಗಳನ್ನು ಅಥವಾ ಆರ್ಥಿಕ ಪ್ರಯೋಜನಗಳನ್ನು ಪಡೆದುಕೊಳ್ಳುವುದಕ್ಕಾಗಿ ಸರ್ಕಾರಿ ನೌಕರನಾಗಿ ತನ್ನ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡಿದ್ದರೆ; ಅಥವಾ ಸರ್ಕಾರಿ ನೌಕರನು ಯಾವುದೇ ವ್ಯಕ್ತಿಗಾಗಿ ಯಾವುದೇ ಅಮೂಲ್ಯ ವಸ್ತುಗಳನ್ನು ಅಥವಾ ಯಾವುದೇ ಸಾರ್ವಜನಿಕ ಹಿತಾಸಕ್ತಿಯ ಹೊರತು ಆರ್ಥಿಕ ಲಾಭಗಳನ್ನು ಪಡೆದುಕೊಳ್ಳುವುದಕ್ಕಾಗಿ ತನ್ನ ಪದವನ್ನು ಬಳಸಿಕೊಂಡಿದ್ದಲ್ಲಿ, ಇವೆಲ್ಲವು ಉಪಬಂಧಗಳನ್ನ ಅನ್ವಯಿಸಿಕೊಳ್ಳುವುದಕ್ಕೆ ಯುಕ್ತವಾದ ಅಂಶಗಳಾಗಿವೆ. ಭ್ರಷ್ಟಾಚಾರ ನಿರೋಧ ಸಂಸ್ಥೆ ಪೋಲೀಸರು ಕಚೇರಿಯಲ್ಲಿ ಕಂಡುಬಂದ 1,590/- ರೂಪಾಯಿಗಳ ಸಂಬಂಧದಲ್ಲಿ ಆಪಾದಿತ ವ್ಯಕ್ತಿಗಳು ತಮಗಾಗಿ ಅಥವಾ ಇತರ

ಯಾರೇ ವ್ಯಕ್ತಿಗಾಗಿ ಎಸಗಿದ ಲಂಚ ಅಥವಾ ಅಕ್ರಮ ಕೃತ್ಯ ಎಂದರೆ ಯಾವುದೇ ಸಾರ್ವಜನಿಕ ಹಿತಾಸಕ್ತಿಯ ಹೊರತು ಅವರ ತನ್ನ ಫಲಾನುಭವತೆಯ ಅನುಕೂಲತೆಗಾಗಿ ಸರ್ಕಾರಿ ನೌಕರರಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವಾಗ ಪಡೆದುಕೊಂಡ ಲಂಚ ಅಥವಾ ಅಕ್ರಮ ಹಣ ಎಂದು ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಹಾಗಾಗಿ ಅಧಿನಿಯಮದ 13(1)(ಡಿ)ಯ ಪ್ರಕರಣವು ಅನ್ವಯಿಸುವುದಕ್ಕೆ ಇಲ್ಲಿ ಲಂಚಕ್ಕಾಗಿ ಇಟ್ಟ ಬೇಡಿಕೆಯ ಹಣ ಮತ್ತು ಸ್ವೀಕರಿಸಿದ ಲಂಚದ ಹಣ ಎಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆದುದರಿಂದ, ಆಪಾದಿತ ವ್ಯಕ್ತಿಗಳು ಯಾವುದೇ ಭ್ರಷ್ಟಾಚಾರದ ಕೃತ್ಯ ಅಥವಾ ಅಕ್ರಮ ಕೃತ್ಯವನ್ನು ಎಸಗಿರುವರೆಂದು ತನಿಖಾಧಿಕಾರಿಯು ಪರಿಶೀಲಿಸಬೇಕಾಗುತ್ತದೆ. ಅಲ್ಲದೆ, ವ್ಯಕ್ತಿಯ ಅಭಿರಕ್ಷೆಯಲ್ಲಿದ್ದ ಹಣವನ್ನು ಸ್ವಾಧೀನಪಡಿಸಿಕೊಂಡು, ಹಾಗೇ ಸ್ವಾಧೀನಪಡಿಸಿಕೊಂಡ ಮೊತ್ತಕ್ಕೆ ಅವನು ಯುಕ್ತವಾದ ದಾಖಲೆಯನ್ನು ಒದಗಿಸಿಲ್ಲವೆಂಬ ಕಾರಣದಿಂದ ಮಾತ್ರವೇ ಆ ಮೊತ್ತವು ಲಂಚದ ಹಣ ಅಥವಾ ಅಕ್ರಮದ ಹಣವೆಂದು ನಿರ್ಧಾರಕ್ಕೆ ಬರಬಾರದು. ಸ್ವಾಧೀನಪಡಿಸಿಕೊಂಡ ಮೊತ್ತವು, ಫಲಾನುಭವದ ಅನುಕೂಲತೆಗಾಗಿ ಅಮೂಲ್ಯ ವಸ್ತುಗಳನ್ನು ಅವನು ಹೇಗೆ ಸಂಪಾದಿಸಿದ ಎಂಬುದನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆಯೂ ವಿವರಿಸಬೇಕಾಗುತ್ತದೆ.

28. ಲೋಕಾಯುಕ್ತ ಪೊಲೀಸರು ಸಲ್ಲಿಸಿದ ವರದಿಯಲ್ಲಿ ಲೋಕಾಯುಕ್ತ ಪೊಲೀಸರು ಮಾಡಿದ ಆಪಾದನೆಗಳಿಗೆ ಅರ್ಜಿದಾರರ ಬಳಿ ಇದ್ದ ಮೊಬಲಿಗಿಗೆ ಸಂಬಂಧಿಸಿದಂತೆ ಅರ್ಜಿದಾರರು ಯಾವುದೇ ವಿವರಣೆಗಳನ್ನು ನೀಡಿರುವುದಿಲ್ಲ ಎಂದು ತಿಳಿಸಿರುವರು. ಆದುದರಿಂದ ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(1)(ಡಿ) ಪ್ರಕರಣದ ಮೇರೆಗೆ ಸರ್ಕಾರಿ ನೌಕರರಾದ ಅರ್ಜಿದಾರರು ದಂಡನೀಯ ಅಪರಾಧವಾದಂತಹ ತಮ್ಮ ಹುದ್ದೆಯನ್ನು ದುರಪಯೋಗಪಡಿಸಿಕೊಳ್ಳುವ ಮೂಲಕ ಸ್ವೀಕರಿಸುವ ಮೊತ್ತವಾಗಿದೆ ಎಂದು ಅಪರಾಧಕೃತ್ಯ ಎಸಗಿರುವರೆಂದು ಸಂಶಯವನ್ನು ವ್ಯಕ್ತಪಡಿಸಿರುವರು. ಅಧಿನಿಯಮದ 13(1)(ಡಿ) ಪ್ರಕರಣವು ಈ ಮುಂದಿನಂತೆ ಹೇಳುತ್ತದೆ, (1) ಸರ್ಕಾರಿ ನೌಕರನಾದ ಯಾರೇ ವ್ಯಕ್ತಿ ಸ್ವತಃ ತನಗಾಗಿ ಅಥವಾ ಇತರ ಯಾರೇ ವ್ಯಕ್ತಿಗಾಗಿ ಯಾವುದೇ

ಅಮೂಲ್ಯ ವಸ್ತುಗಳನ್ನು ಅಥವಾ ಆರ್ಥಿಕ ಅನುಕೂಲತೆಗಳನ್ನು ಲಂಚದ ಅಥವಾ ಅಕ್ರಮದ ಮೂಲಕ ಪಡೆದುಕೊಳ್ಳುವುದು ಎಂದು ಅರ್ಥ; ಅಥವಾ (ii) ಸರ್ಕಾರಿ ನೌಕರನಾದ ಯಾರೇ ವ್ಯಕ್ತಿಯು ತನಗಾಗಿ ಅಥವಾ ಇತರ ಯಾರೇ ವ್ಯಕ್ತಿಗಾಗಿ ಯಾವುದೇ ಅಮೂಲ್ಯ ವಸ್ತುಗಳನ್ನ ಅಥವಾ ಆರ್ಥಿಕ ಅನುಕೂಲತೆಗಳನ್ನು ಪಡೆದುಕೊಳ್ಳುವುದಕ್ಕಾಗಿ ಸರ್ಕಾರಿ ನೌಕರನು ತನ್ನ ಪದವನ್ನು ದುರಪಯೋಗಪಡಿಸಿಕೊಳ್ಳುವುದು; ಅಥವಾ (iii) ಪದವನ್ನ ಹೊಂದಿರುವ ಸರ್ಕಾರಿ ನೌಕರನು ಯಾವುದೇ ಸಾರ್ವಜನಿಕ ಹಿತಾಸಕ್ತಿಯ ಹೊರತುಪಡಿಸಿ ಯಾವುದೇ ವ್ಯಕ್ತಿಗಾಗಿ ಅಮೂಲ್ಯ ವಸ್ತುಗಳನ್ನು ಅಥವಾ ಆರ್ಥಿಕ ಅನುಕೂಲತೆಗಳನ್ನು ಪಡೆದುಕೊಂಡಿರುವುದು ಲಂಚವೆಂದು ಅಕ್ರಮವೆಂದು ಸ್ಪಷ್ಟವಾಗಿ ಹೇಳುತ್ತದೆ. ಈ ಮೇಲಿನ ಯಾವುದೇ ಒಂದು ಅಂಶವು ಕಂಡುಬಂದರೆ ಅಧಿನಿಯಮದ 13(1)(ಡಿ) ಪ್ರಕರಣವನ್ನು ಅನ್ವಯಿಸಬಹುದಾಗಿದೆ. ಭ್ರಷ್ಟಾಚಾರ ನಿರೋಧ ಸಂಸ್ಥೆ ಪೊಲೀಸರು ಸ್ವಾಧೀನಪಡಿಸಿಕೊಂಡ 1,590/- ರೂಪಾಯಿಗಳ ಮೊತ್ತದ ಸಂಬಂಧದಲ್ಲಿ ವಿಚಾರಣೆ ಮಾಡಿದಾಗ ಆಪಾದಿತ ವ್ಯಕ್ತಿಗಳು ಯುಕ್ತವಾದ ವಿವರಣೆಯನ್ನು ನೀಡಿರುವರು. ಆಪಾದಿತ ವ್ಯಕ್ತಿಗಳು ನೀಡಿದ ವಿವರಣೆಯನ್ನು ತೆಗೆದುಕೊಂಡು ಮತ್ತು ಆಯುಕ್ತರು, ವಾಣಿಜ್ಯ ತೆರಿಗೆಗಳು, ಬೆಂಗಳೂರು ಇವರು ಸರ್ಕಾರವು ದಿನಾಂಕ: 01.12.1999 ರಂದು ಸಂ. ವಿಸಿಆರ್ ಐಎರ್ಝಿಡ್‌ಸಿಆರ್-23.ಬಿ:93-94ರಲ್ಲಿ ಹೊರಡಿಸಿದ ಸುತ್ತೋಲೆಗಳನ್ನು ಸಹ ಗಮನಕ್ಕೆ ತೆಗೆದುಕೊಂಡಾಗ, ಸುತ್ತೋಲೆಯಲ್ಲಿ ಸದರಿ ಇಲಾಖೆಯ ಸಿಬ್ಬಂದಿ ವರ್ಗವು ಕಚೇರಿಯೊಳಗೆ ಪ್ರತ್ಯೇಕಿಸುವ ಸಮಯದಲ್ಲಿ ಅವರು ತನ್ನ ಸಂಬಳದ ಶೇ.25ರಷ್ಟನ್ನು ಮೀರದಂತಹ ಮೊತ್ತವನ್ನ ಮಾತ್ರ ತಮ್ಮಲ್ಲಿ ಇಟ್ಟುಕೊಳ್ಳಲು ಅವಕಾಶವಿದೆ ಹಾಗಾಗಿ ಅವರು ಕಚೇರಿ ಪ್ರವೇಶಿಸುವ ಸಮಯದಲ್ಲಿ ತಾವು ಹೊಂದಿರುವ ಹಣವನ್ನು ಘೋಷಿಸಬೇಕೆಂದು ಸುತ್ತೋಲೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅದರಂತೆ ಅರ್ಜಿದಾರರು ತಮ್ಮಲ್ಲಿ ಕಂಡು ಬಂದ ಆ ಯಾವುದೇ ಮೊತ್ತವನ್ನು ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು ವಿಚಾರಣೆ ಅಥವಾ ತನಿಖೆಯನ್ನು ಯುಕ್ತವಾಗಿ ನಡೆದ ತರುವಾಯ ನ್ಯಾಯಾಲಯಕ್ಕೆ ಆ ಯಾವುದೇ ವರದಿಯನ್ನು ದಾಖಲಿಸುವ ಮುಂಚೆ ಅರ್ಜಿದಾರರು ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರಿಗೂ ಸುತ್ತೋಲೆಯ ಅಂಶವನ್ನು

ಮನವರಿಕೆ ಮಾಡಿಕೊಟ್ಟಿರುತ್ತಾರೆ. ಹೀಗಿದ್ದರೂ ಸಹ, ಈ ತನಿಖಾ ಏಜೆನ್ಸಿಯು, ಚಾರ್ಜ್‌ಶೀಟ್‌ನ್ನು ದಾಖಲಿಸುವುದಕ್ಕೆ ಲೋಕಾಯುಕ್ತ ಪೊಲೀಸರು ಸಾಕಷ್ಟು ಮಾಹಿತಿ ಲಭ್ಯವಿರುವುದಿಲ್ಲ ಎಂದು ನೀಡಿದ ಮಾಹಿತಿಯಿಂದ ಅನಗತ್ಯ ಚಾರ್ಜ್‌ಶೀಟನ್ನು ದಾಖಲಿಸುವುದನ್ನು ತಪ್ಪಿಸಬಹುದಾಗಿತ್ತು ಹಾಗೂ ಅರ್ಜಿದಾರರು ಅನುಭವಿಸಿದ ಅನಗತ್ಯ ಕಿರುಕುಳವನ್ನು ತಪ್ಪಿಸಬಹುದಾಗಿತ್ತು.

29. ಭ್ರಷ್ಟಾಚಾರ ನಿರೋಧ ಸಂಸ್ಥೆ ಪೊಲೀಸರು ವ್ಯಕ್ತಿಯ ಅಭಿರಕ್ಷೆಯಲ್ಲಿದ್ದ ಹಣವನ್ನು ಹಾಗೂ ಯಾವುದೇ ಇತರ ವಸ್ತುವನ್ನು ಸ್ವಾಧೀನಪಡಿಸಿಕೊಂಡು, ಸದರಿ ಹಣವನ್ನು ಅರ್ಜಿದಾರರು ತಮ್ಮ ಹುದ್ದೆಯನ್ನು ದುರುಪಯೋಗ ಪಡಿಸಿಕೊಳ್ಳುವ ಮೂಲಕ ಲಂಚ ಅಥವಾ ಅಕ್ರಮದ ಮೂಲಕ ಪಡೆದುಕೊಂಡ ಹಣವಾಗಿದೆ ಮತ್ತು ವಸ್ತುವಾಗಿದೆ ಎಂಬ ಮನಸ್ಥಿತಿಯಲ್ಲಿ ನೋಡಿರುತ್ತಾರೆ.

30. ಎರಡನೇ ಹಂತದ ವಾದದಲ್ಲಿ ಮಾನ್ಯ ನ್ಯಾಯವಾದಿಗಳು ಅಧಿನಿಯಮದ 13(1)(ಇ) ಪ್ರಕರಣವನ್ನು ಅಳವಡಿಸಿಕೊಂಡಿರುವ ಸಂಬಂಧದಲ್ಲಿ ತೀವ್ರವಾಗಿ ಕುತೂಹಲಕಾರಿಯಾಗಿ ಸಹ ಕಂಡುಬರುತ್ತದೆ ಎಂದು ನಿವೇದಿಸಿರುವರು. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 13(1)(ಇ) ಪ್ರಕರಣ ಹೀಗೆ ಹೇಳಿದೆ – *"ಯಾರೇ ವ್ಯಕ್ತಿಯ ಪರವಾಗಿ ಸರ್ಕಾರಿ ನೌಕರನಾಗಿ ತಾನು ಹೊಂದಿರುವ ಪದದ ಆ ಯಾವುದೇ ಕಾಲಾವಧಿಯಲ್ಲಿ ಬೇರೆಯವರು ಅನುಭೋಗಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಅಥವಾ ತಾನೇ ಅನುಭೋಗಿಸಿದ್ದರೆ ಹಾಗೇ ಅನುಭೋಗದ ಆದಾಯದ ಮೂಲಗಳಿಂದ ಬಂದ ಆರ್ಥಿಕ ಸಂಪನ್ಮೂಲ ಅಥವಾ ಸ್ವತ್ತು ಅಸಮ ಪ್ರಮಾಣದಲ್ಲಿದ್ದಲ್ಲಿ ಸರ್ಕಾರಿ ನೌಕರನು ಅದನ್ನು ಮನದಟ್ಟು ಮಾಡಿಕೊಡದಿದ್ದರೆ."* ಆದುದರಿಂದ, ಈ ಮೊಕದ್ದಮೆಯಲ್ಲಿ ಸ್ವಾಧೀನಪಡಿಸಿಕೊಂಡ 1,590/– ರೂಗಳು ಸಂಬಂಧದಲ್ಲಿ ಸದರಿ ಮೊತ್ತವು ಅರ್ಜಿದಾರರ ಆರ್ಥಿಕ ಸಂಪನ್ಮೂಲವನ್ನು ಮೀರಿದ ಮೊತ್ತವೆಂದು ಕಾಲ್ಪನಿಕವಾಗಿ ಹೇಳಲು ಬರುವುದಿಲ್ಲ. ಹಾಗಾಗಿ, ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು ಅಧಿನಿಯಮ 13(1)(ಇ) ಪ್ರಕರಣದ ಉಪಬಂಧವನ್ನು ಆಪಾದಿತ ವ್ಯಕ್ತಿಗಳ ವಿರುದ್ಧ ಅವರ ತನಿಖೆಗೆ

ಆಧಾರವಾಗುವಂತೆ ಮುಂದಿನ ಕ್ರಮ ತೆಗೆದುಕೊಳ್ಳಲು ಸದರಿ ಪ್ರಕರಣವನ್ನು ಅನ್ವಯಿಸಿಕೊಂಡಿರುತ್ತಾರೆ. ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು ಅರ್ಜಿದಾರರ ಆದಾಯ ಮತ್ತು ವ್ಯಯದ ವಿವರಣಾ ಪಟ್ಟಿಯ ವರದಿಯನ್ನು ಪಡೆದುಕೊಂಡು ಯಾವುದೇ ಮೂಲಾಧರವಿಲ್ಲದ ಹಣದ ಬಗ್ಗೆಯೂ ಸಹ ವಿಚಾರಣೆಯನ್ನು ಮಾಡಿರುತ್ತಾರೆ. ಈ ಸಂಬಂಧದಲ್ಲಿಯೇ ಅಧಿನಿಯಮದ 13(1)(ಇ) ಪ್ರಕರಣದ ಅಡಿಯಲ್ಲಿ ಈ ವಿಷಯವನ್ನು ತನಿಖೆ ಮಾಡುವುದಕ್ಕೆ ಅವರು ಕ್ರಮ ಕೈಗೊಂಡಿರುವರು, ತನಿಖೆ ನಡೆಸುವುದಕ್ಕೆ ಅವರಿಗೆ ಇನ್ನು ಯಾವುದೇ ಇತರ ವಸ್ತು ವಿಷಯವು ಲಭ್ಯವಾಗಿರದ ಕಾರಣದಿಂದ ಸದರಿ ಈ ಪ್ರಕರಣದ ಅಡಿಯಲ್ಲಿಯೇ ತನಿಖೆಮಾಡಲು ಕ್ರಮಕೈಗೊಂಡಿರುವರು. ಆದುದರಿಂದ, ಮೇಲಿನ ಸದರಿ ಉಪಬಂಧಗಳ ಅಡಿಯಲ್ಲಿ ಪ್ರಕರಣವು ನೋಂದಾಯಿತವಾಗಿದೆಯೆಂಬ ಕಾರಣ ಮಾತ್ರದಿಂದಲೇ ಆಪಾದಿತರ ವಿರುದ್ಧ ಪೊಲೀಸರು ಆರೋಪಪಟ್ಟಿಯನ್ನು ಸಲ್ಲಿಸಬೇಕೆಂದೇನೂ ಇಲ್ಲ. ಪ್ರತಿಯೊಂದು ಮೊಕದ್ದಮೆಯಲ್ಲಿ ಸಂಗತಿಗಳು ಮತ್ತು ಸನ್ನಿವೇಶಗಳ ಮೇಲೆ ಇದು ಅವಲಂಬಿಸಿರುತ್ತದೆ. ಈ ಅಂಶಗಳನ್ನು ಗಮನಕ್ಕೆ ತಂದುಕೊಂಡು ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರು ವಿಷಯವನ್ನು ತನಿಖೆ ಮಾಡಿ ಮತ್ತು ಕಾನೂನಿಗೆ ಅನುಸಾರವಾಗಿ ನ್ಯಾಯಾಲಯಕ್ಕೆ ಯುಕ್ತವಾದ ವರದಿಯನ್ನು ಸಲ್ಲಿಸುವುದು.

31. ಮೇಲಿನ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳ ಅಡಿಯಲ್ಲಿ, ಲೋಕಾಯುಕ್ತ ಪೊಲೀಸರು ದಾಖಲಿಸಿದ ಪ್ರಥಮ ಮಾಹಿತಿ ವರದಿಯನ್ನು, ವಿಷಯಕ್ಕೊಳಪಟ್ಟು ತನಿಖೆ ಮಾಡುವುದಕ್ಕೆ ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೊಲೀಸರಿಗೆ ಶಾಸನಾತ್ಮಕ ಅಧಿಕಾರವನ್ನು ನಿಹಿತಗೊಳಿಸಿರುವುದರಿಂದ, ಲೋಕಾಯುಕ್ತ ಪೊಲೀಸರು ದಾಖಲಿಸಿದ ಪ್ರಥಮ ಮಾಹಿತಿ ವರದಿಯೂ ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾಗಿದೆ ಎಂದು ಹೇಳಲು ಬರುವುದಿಲ್ಲ. ಆದರೆ, ತನಿಖಾ ಏಜೆನ್ಸಿಯು ನ್ಯಾಯ ಸಮ್ಮತ ವಿವೇಚನೆಯನ್ನು ಬಳಸಿ, ಆಪಾದಿತ ವ್ಯಕ್ತಿಗಳು ವಾಸ್ತವವಾಗಿ ಏಗಿದ ಅಪರಾಧಗಳನ್ನು ಎಸಗಿದ್ದಾರೆಯೆ ಎಂಬುದನ್ನು ಖಚಿತಪಡಿಸಿ ಕೊಂಡು ಅವರ ವಿರುದ್ಧ ಮುಂದಿನ ಕ್ರಮ ತೆಗೆದುಕೊಳ್ಳುವುದು ಮತ್ತು ತದನಂತರದಲ್ಲಿ,

ಅವರು ನ್ಯಾಯಾಲಯಕ್ಕೆ ಯುಕ್ತವಾದ ವರದಿಯನ್ನು ಸಲ್ಲಿಸುವುದಕ್ಕೆ ಅವರು ವಿವೇಚನಾಧಿಕಾರವನ್ನು ಹೊಂದಿರುತ್ತಾರೆ.

32. ಭ್ರಷ್ಟಾಚಾರ ನಿರೋಧ ಸಂಸ್ಥೆಯ ಪೋಲೀಸರು, ಅರ್ಜಿದಾರರ ವಿರುದ್ಧ ಒಂದೊಮ್ಮೆ ಯುಕ್ತವಾದ ಸಾಕ್ಷ್ಯದ ಅಥವಾ ಆಧಾರದ ಹೊರತು ತನಿಖೆಯನ್ನು ನಡೆಸಿ ಯಾವುದೇ ಆರೋಪ ಪಟ್ಟಿಯನ್ನು ಸಲ್ಲಿಸಿದಲ್ಲಿ, ಆ ತರುವಾಯ, ಅರ್ಜಿದಾರರು ತಮ್ಮ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಅದನ್ನು ಮತ್ತೆ ಪ್ರಶ್ನಿಸುವ ಸ್ವಾತಂತ್ರ್ಯವನ್ನು ಹೊಂದಿರುವರು.

ಈ ಅಭಿಪ್ರಾಯೋಕ್ತಿಗಳೊಂದಿಗೆ, ಕೂಲಂಕುಷವಾಗಿ ವಿಚಾರಣೆ ಮಾಡಿದ ಈ ಹಂತದಲ್ಲಿ, ಇಡೀ ವ್ಯವಹರಣೆಗಳನ್ನು ವಜಾಮಾಡುವುದು ಈ ನ್ಯಾಯಾಲಯಕ್ಕೆ ಯುಕ್ತವಾಗಿ ಕಂಡುಬರುವುದಿಲ್ಲ. ಆದುದರಿಂದ, ಅರ್ಜಿಯು ವಜಾಗೊಳ್ಳಲು ಅರ್ಹವಾಗಿದೆ. ಅದಕ್ಕನುಸಾರವಾಗಿ ಅರ್ಜಿಯನ್ನು ವಜಾಗೊಳಿಸಲಾಗಿದೆ.